
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2022
ಬೆಲೆ ರೂ. 1




## ಅಮೃತ ಮಹೋತ್ಸವ ವರ್ಷ

1948-2022

## 2022

## ಹೊಸ ವರ್ಷದ ಶುಭಾಶಯಗಳು

# ಬೆಂಗಳೂರಿನ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ಸನ್ಮಾನ



ಬೆಂಗಳೂರಿನ ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟದ ವತಿಯಿಂದ ದಿನಾಂಕ 10.12.2021 ರಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ಅಭಿನಂದಿಸಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀ ಶಿವಪ್ಪ ಎಂ, ಶ್ರೀ ಕೆ.ಎಸ್. ಮೂರ್ತಿ, ಶ್ರೀ ಸಂತೋಷ ಜೆ., ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರುಗಳನ್ನು ಸಹ ಅಭಿನಂದಿಸಿ ಸನ್ಮಾನಿಸಿದರು.

ಒಕ್ಕೂಟದ ಸದಸ್ಯರೂ, ರಾಜ್ಯ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಯುವ ಸಾಹಿತಿಗಳಾದ, ಡಾ. ಎಂ. ಚಂದ್ರ ಅವರ ಅಭಿನಂದನಾ ಕೃತಿ 'ಸೃಜನವಂತ'ದ ಮುಖಪುಟವನ್ನು ಬಿಡುಗಡೆ ಮಾಡಲಾಯಿತು. ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗರಾಜ್ ಕೆ., ಜನಪದ ಜಾತ್ರೆಯ ನಿರ್ದೇಶಕಿ ಶ್ರೀಮತಿ ಶಿವಮ್ಮ, ಒಕ್ಕೂಟದ ಸದಸ್ಯರೂ, ಯುವ ಸಾಹಿತಿಗಳೂ ಆದ ಡಾ. ಎನ್. ಗೋವಿಂದ ರಾಜು, ಸೋಮನ ಕುಣಿತ ಕಲಾವಿದರುಗಳು, ಜಾನಪದ ಜಾತ್ರೆಯ ಪ್ರಧಾನ ಸಂಯೋಜಕರಾದ ಶ್ರೀ ರೇವನಾಥ ಬಿ. ಹಿರೇಮಗಳೂರು, ಸಂಚಾಲಕರಾದ ಡಾ. ಬಿ.ಆರ್. ಶಿವಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು.

ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾದ ಯಲ್ಲಾಲಿಂಗ ಕೊಪ್ಪದ, ಡಾ. ಪರಶುರಾಮ್, ಶ್ರೀ ನರಸಿಂಹ ಮೂರ್ತಿ ಮೊದಲಾದ ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು.

**ಅಭಿಮತ ವರದಿ**









**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 4

ಜನವರಿ 2022



**ಪ್ರಧಾನ ಸಂಪಾದಕ**

ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳ ಸದಸ್ಯರು**

ಕೆ.ಎಸ್. ಮೂರ್ತಿ

ಅಮರೇಶ ದೊಡ್ಡಮನಿ

ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**

ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**

ಆರ್. ರೇಣುಕುಮಾರ್

**ಕೋಶಾಧಿಕಾರಿ**

ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**

ಬಿ. ನಾರಾಯಣ

ಸುಮಿತಾ ಮುರಗೋಡ

**ಸಮಿತಿ ಸದಸ್ಯರು**

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜಿ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮು ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ




# ಸಂಪಾದಕೀಯ

**ಆತ್ಮೀಯ ಓದುಗ ಬಂಧುಗಳೇ ನಿಮಗೆಲ್ಲರಿಗೂ 2022 ನೇ ಹೊಸ ವರ್ಷದ ಶುಭಾಶಯಗಳು.**

ನಮಸ್ಕಾರ. ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ! ಆ ನಂತರ ಆ ಮಗುವನ್ನು "ಜಾತಿ, ಮತ"ದ ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಹಾಗಾಗಬಾರದು. ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು, ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು. ಇದು ವಿಶ್ವ ಮಾನವ ಸಂದೇಶವನ್ನು ರಚಿಸಿ ಕನ್ನಡಕ್ಕೆ ವಿಶ್ವ ಖ್ಯಾತಿ ತಂದು ಕೊಟ್ಟ ಮಹಾನ್ ಚೇತನ ಕುವೆಂಪು ಅವರ ಚಿಂತನೆ.

ಈ ಚಿಂತನೆ ಬುದ್ಧನಿಂದ ಆರಂಭವಾಗಿ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್, ಕುವೆಂಪು ಮೊದಲಾದ ಎಲ್ಲ ವಿಭೂತಿ ಪುರುಷರಿಂದ ಅವರು ಬದುಕಿದ್ದ ಕಾಲಕ್ಕೆ ರೂಢಿಯಲ್ಲಿದ್ದ ಭಾಷೆ ಮತ್ತು ಸಾಹಿತ್ಯದಲ್ಲಿ ವ್ಯಕ್ತಗೊಂಡು ಜನಮಾನಸವನ್ನು ಪ್ರಭಾವಿಸುತ್ತ ಬಂದಿದೆ. ವಿಶೇಷವಾಗಿ ಕನ್ನಡದಲ್ಲಿ ವಚನಕಾರರು ಹನ್ನೆರಡನೆ ಶತಮಾನದಲ್ಲಿ ಈ ಬಗೆಯ ಚಿಂತನೆಗಳನ್ನು ವ್ಯಕ್ತಪಡಿಸಿ, ಅವುಗಳ ಕಾರ್ಯಶಃ ಅನುಷ್ಠಾನಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ತಮ್ಮ ಬದುಕನ್ನೇ ಸಮರ್ಪಿಸಿಕೊಂಡಿರುವುದನ್ನು ಇತಿಹಾಸದಿಂದ ನಾವು ಕಲಿತಿದ್ದೇವೆ. ಅದೇ ಚಿಂತನೆಗಳಿಗೆ 20 ನೇ ಶತಮಾನದಲ್ಲಿ ಆಧುನಿಕ ಶೈಲಿಯಲ್ಲಿ ರೂಪು ಕೊಟ್ಟವರು ರಾಷ್ಟ್ರ ಕವಿ ಕುವೆಂಪು.

ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಮಾರ್ಗದರ್ಶನ/ಆದರ್ಶಗಳು ಸಾರ್ವಕಾಲಿಕ. ಕನ್ನಡಕ್ಕೆ ಹೊಸ ನುಡಿಗಟ್ಟು ಹಾಗೂ ಹೊಸ ಕಲ್ಪನೆಗಳನ್ನು ನೀಡಿ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಧೀಮಂತ ಸಾಹಿತಿ. 'ಮನುಜ ಮತ ವಿಶ್ವಪಥ' ಸಂದೇಶ ಸಾರಿದ ಶ್ರೇಷ್ಠ ವಿಶ್ವಮಾನವ. ಅವರ ಜನ್ಮ ದಿನಾಚರಣೆಯನ್ನು 'ವಿಶ್ವ ಮಾನವ ದಿನಾಚರಣೆ'ಯನ್ನಾಗಿ ಆಚರಿಸುವ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿರುವ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಕೋಟಿ ಕೋಟಿ ಅಭಿನಂದನೆಗಳು.

ಇನ್ನು, ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ತಲೆದೋರಿರುವ ಬೆಳಗಾವಿ ಗಡಿ ವಿವಾದ ಬಗೆಹರಿಸಲು, 1966ರಲ್ಲಿ ಕೇಂದ್ರ ಸರ್ಕಾರ ಭಾರತ ಮತ್ತು ಪಾಕಿಸ್ತಾನಗಳ ಗಡಿ ರೇಖೆ ಗುರುತಿಸಲು ರಚಿಸಿದ್ದ ರಾಡ್ಕ್ಲಿಫ್ ಆಯೋಗದ ಸದಸ್ಯರೂ ಆಗಿ ಅನುಭವ ಹೊಂದಿದ್ದ ಜಸ್ಟಿಸ್ ಮೆಹರ್ ಚಂದ್ ಮಹಾಜನ್ ಅವರ ನೇತೃತ್ವದಲ್ಲಿ ಆಯೋಗ ರಚಿಸಿತು. ಸಂವಿಧಾನಿಕವಾಗಿ ಸ್ಥಾಪನೆಗೊಂಡ ಈ ಆಯೋಗ 1967 ರಲ್ಲಿ ನೀಡಿದ ವರದಿಯನ್ನು 1972 ರಲ್ಲಿ ಸಂಸತ್ತಿನಲ್ಲಿ ಮಂಡಿಸಲಾಗಿದ್ದು ಈ ವರದಿಯನ್ನು ಜಾರಿಗೆ ತರಲು ಕಳೆದ ಆರು ದಶಕಗಳಿಂದಲೂ ಕರ್ನಾಟಕ ಒತ್ತಾಯಿಸುತ್ತಾ ಬಂದಿದ್ದರೂ ಅದು ಜಾರಿಗೆ ಬಂದಿಲ್ಲ. ಅ ವರದಿಯನ್ನು ಒಪ್ಪದ ಮಹಾರಾಷ್ಟ್ರ ಸರ್ಕಾರ ಮಾತ್ರ ಕೇಂದ್ರ ಸರ್ಕಾರದ ಮಧ್ಯಪ್ರವೇಶಕ್ಕೆ ಇವತ್ತಿಗೂ ಒತ್ತಾಯಿಸುತ್ತಿದೆ. ಗಡಿ ತಂಟೆ ಎರಡೂ ರಾಜ್ಯಗಳ ಗಡಿಯಲ್ಲಿರುವ ಜನರ ಜೀವನವನ್ನು ಪ್ರಭಾವಿಸುತ್ತಲೇ ಇದೆ. ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವೆ ತಲೆದೋರಿರುವ ಬೆಳಗಾವಿ ಗಡಿ ವಿವಾದ, ಹಾಗೆಯೆ ಕನ್ನಡ ಭಾಷೆಯ ಮೇಲೆ ಹೆಚ್ಚುತ್ತಿರುವ ಅನ್ಯ ಭಾಷೆಗಳ ಪ್ರಭಾವ, ಈ ನಡುವೆ ಕರ್ನಾಟಕದಲ್ಲಿಯೇ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಸೇರಿದಂತೆ ಕರ್ನಾಟಕದ ನೆಲ, ಜಲ, ನುಡಿಗಳ ಬಗೆಗಿನ ಅನೇಕ ಸಮಸ್ಯೆಗಳನ್ನು ಕನ್ನಡಿಗರು ಇಂದು ಮುಖಾ ಮುಖಿಯಾಗಬೇಕಿದೆ. ಈ ಹಿನ್ನೆಲೆಯಲ್ಲಿ ಹೊರನಾಡ ಕನ್ನಡಿಗರು ಮಾಡಬಹುದಾದ ಕೆಲಸವೇನೆಂದರೆ ಕರ್ನಾಟಕದ ನೆಲ, ಜಲ, ನುಡಿಗಳ ಬಗ್ಗೆ ದೇಶದಾದ್ಯಂತ ಅಷ್ಟೇ ಅಲ್ಲ ಜಗತ್ತಿನಾದ್ಯಂತ ಇರುವ ಎಲ್ಲ ಕನ್ನಡಿಗರು ಆಸ್ಥೆ ವಹಿಸಿ, ನಮ್ಮ ನಾಡಿನ ಚರಿತ್ರೆ, ಸಂಸ್ಕೃತಿ, ಭಾಷೆಗಳ ಉಳಿವು ಮತ್ತು ಉದ್ಧಾರಕ್ಕಾಗಿ ದನಿಯೆತ್ತುವ ಕೆಲಸವನ್ನು ಮಾಡಬೇಕಿದೆ. ಹಾಗೆಯೇ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಭಾಷೆ –ಸಂಸ್ಕೃತಿ–ಪರಂಪರೆಯನ್ನು ಕಲಿಸುವ ಕೆಲಸವನ್ನು ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ.

ಈ ನಿಟ್ಟಿನಲ್ಲಿ ಕನ್ನಡ ಹಾಗೂ ಕರ್ನಾಟಕವನ್ನು ರಾಷ್ಟ್ರ ರಾಜಧಾನಿಯಲ್ಲಿ ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುತ್ತಾ ಬಂದಿರುವ ದೆಹಲಿ ಕರ್ನಾಟಕ ಸಂಘ ತನ್ನ ಧ್ಯೇಯೋದ್ದೇಶಗಳನ್ನು ಸಾಕಾರಗೊಳಿಸಲು ನಿರಂತರವಾಗಿ ಶ್ರಮಿಸುತ್ತಾ ಬಂದಿದೆ. ಹೊರನಾಡ ಕನ್ನಡಿಗರ ಅನೇಕ ಸಂಘ ಸಂಸ್ಥೆಗಳು ಕಾರ್ಯೋನ್ಮುಖವಾಗಿರುವುದು ಕನ್ನಡ ನಾಡಿನ ಹೊರಗೆ ಕನ್ನಡ ತನ್ನ ಅಸ್ತಿತ್ವವನ್ನು ಇನ್ನಷ್ಟು ಮತ್ತಷ್ಟು ಅರ್ಥಪೂರ್ಣವಾಗಿ ಸ್ಥಾಪಿಸಿಕೊಳ್ಳಲು ನೆರವಾಗುತ್ತಿರುವುದು ಶ್ಲಾಘನೀಯ.

ಇದೇ ಡಿಸೆಂಬರ್ 29 ರಂದು ಕರ್ನಾಟಕದಾದ್ಯಂತ ಮತ್ತು ದೇಶದ ಇತರೆಡೆಗಳಲ್ಲೂ ಆಚರಿಸಲ್ಪಟ್ಟ ಕವಿ ಕುವೆಂಪು ಅವರ 118ನೇ ಜನ್ಮದಿನ (ವಿಶ್ವ ಮಾನವ ದಿನಾಚರಣೆ)ವನ್ನು ದೆಹಲಿಯ ಸ್ಥಳೀಯ ಸಂಘ ಸಂಸ್ಥೆಗಳು ಮುಖ್ಯವಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಕರ್ನಾಟಕ ಸಂಘದ ಸಹಕಾರದೊಂದಿಗೆ ಆಚರಿಸಿದ ದೆಹಲಿಯ ಮಕ್ಕಳ ಸಾಹಿತ್ಯ ಪರಿಷತ್ ಘಟಕ, ಹಾಗೆಯೇ ದೆಹಲಿಯ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದಲೂ ಆಚರಿಸಲಾಯಿತು. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದಿಂದ 534 ನೇ ಕನಕ ಜಯಂತಿ ಆಚರಣೆ, ಸ್ಫೂರ್ತಿ ಫೌಂಡೇಶನ್‌ನಿಂದ ಆಚರಿಸಿದ ಅಂಬೇಡ್ಕರ್ ಪರಿನಿರ್ವಾಣ ದಿನ ಹಾಗೂ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮವೂ ಸೇರಿದಂತೆ, ತಜ್ಞ ವೈದ್ಯರಿಂದ ದೆಹಲಿ ಎನ್.ಸಿ.ಆರ್ ಕನ್ನಡಿಗರಿಗೆ ಆರೋಗ್ಯ ಮತ್ತು ವೈದ್ಯಕೀಯ ಸಲಹೆಗಾಗಿ ಆಯೋಜಿಸಿದ್ದ ಆರೋಗ್ಯ ಆರೈಕೆ ಮತ್ತು ಇತರ ಅನೇಕ ಮಾಹಿತಿ ಮತ್ತು ವರದಿಗಳನ್ನು ಒಳಗೊಂಡ ಹೊಸ ವರ್ಷದ ಮೊದಲ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ.

ಬಂಧುಗಳೇ ಕಳೆದ ಎರಡು ವರ್ಷಗಳಿಂದ ಇಡೀ ಜಗತ್ತನ್ನು ಕಾಡುತ್ತಿರುವ ಮಾರಕ ರೋಗ ಕೊರೊನದ ಜೊತೆಗೆ ಒಮಿಕ್ರೋನ್ ಎಂಬ ಮತ್ತೊಂದು ಮಾರಕ ರೋಗ ಜಗತ್ತನ್ನು ಭಾಧಿಸುತ್ತಿದೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಹಾಗೆಯೆ ಸರ್ಕಾರದ ನಿಯಮಾವಳಿಯನ್ನು ತಪ್ಪದೆ ಪಾಲಿಸಿ, ಇಡೀ ಸಮಾಜ ಮತ್ತು ದೇಶದ ತವನ್ನು ಕಾಯೋಣ. ಎಲ್ಲರೂ ಕರೋನದ ಕರಾಳ ಛಾಯೆಯಿಂದ ತಪ್ಪಿಸಿಕೊಂಡು ಹೊಸ ವರ್ಷದಲ್ಲಿ ಎಲ್ಲರೂ ಆರೋಗ್ಯದಿಂದ ಬದುಕುವಂತಾಗಲೆಂದು ಆಶಿಸುತ್ತಾ ಎಲ್ಲರಿಗೂ ಮತ್ತೊಮ್ಮೆ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

## ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳಿಗೆ ಹೊಸ ವರ್ಷದ ಶುಭಾಶಯಗಳು. ಬಂಧುಗಳೇ, ಈ ವರ್ಷ ದೆಹಲಿ ಕರ್ನಾಟಕ ಸಂಘಕ್ಕೆ 75 ವರ್ಷಗಳು ತುಂಬುತ್ತಿದ್ದು ಇದು ಅಮೃತ ಮಹೋತ್ಸವ ವರ್ಷವಾಗಿದೆ. ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ವೈವಿಧ್ಯಮಯ ಕಾರ್ಯಕ್ರಮಗಳ ಜೊತೆಗೆ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿಯಲ್ಲಿ ಆಚರಣೆ ಮಾಡುತ್ತಿದ್ದೇವೆ.

ಪ್ರತಿ ತಿಂಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚು ಬೇರೆ ಬೇರೆ ಜಿಲ್ಲೆಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ಜವಾಬ್ದಾರಿಯನ್ನು ನೀಡಲಾಗಿದೆ. ಪ್ರತಿ ತಿಂಗಳ ಆಯಾ ಜಿಲ್ಲೆಯ ಕಾರ್ಯಕ್ರಮಗಳ ಜೊತೆಗೆ ವರ್ಷದ ಅಂತ್ಯದ ಹೊತ್ತಿಗೆ ಕೊನೆಯ ಕಾರ್ಯಕ್ರಮವಾಗಿ ಎಲ್ಲ ಕನ್ನಡಿಗರನ್ನು ಸೇರಿಸಿ ದೊಡ್ಡ ಮಟ್ಟದ ಸಮಾರೋಪ ಕಾರ್ಯಕ್ರಮವನ್ನು ತಾಲ್ಕತೋರ ಕ್ರೀಡಾಂಗಣದಲ್ಲಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಮುಖ್ಯ ಅತಿಥಿಗಳಾಗಿ ಆಮಂತ್ರಿಸಿ ಉದ್ಘಾಟನೆ ಮಾಡಿಸುವುದರ ಮೂಲಕ ಆಯೋಜಿಸಬೇಕೆಂದು ನಮ್ಮೆಲ್ಲರ ಅಭಿಲಾಷೆಯಾಗಿದೆ. ಈಗಾಗಲೇ ಕಾರ್ಯಕ್ರಮದ ಸಿದ್ಧತೆಗಳು ನಡೆಯುತ್ತಿವೆ.

ಆತ್ಮೀಯರೇ, ನಮ್ಮ ಹಿರಿಯರು ಕಟ್ಟಿದ ದೆಹಲಿ ಕರ್ನಾಟಕ ಸಂಘಕ್ಕೆ ಎಪ್ಪತ್ತೈದು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ನಾವು ಸಹ ಇತಿಹಾಸದಲ್ಲಿ ಉಳಿಯುವಂತಹ ಕೆಲಸ ಮಾಡಬೇಕಾಗಿದೆ. ಕರ್ನಾಟಕದಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯ ಮಾಡಬೇಕೆಂಬುದು ನಮ್ಮ ಅಭಿಲಾಷೆ. ಇದಕ್ಕೆ ಈಗಾಗಲೇ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಹೊರಟ್ಟಿರವರೊಂದಿಗೆ ಚರ್ಚಿಸಲಾಗಿದ್ದು, ಅವರು ಇದಕ್ಕೆ ಪೂರಕವಾಗಿ ಸ್ಪಂದಿಸಿರುತ್ತಾರೆ ಹಾಗು ಕರ್ನಾಟಕ ಸರ್ಕಾರದಿಂದ ಸಾಧ್ಯವಾದಷ್ಟು ಮಟ್ಟಿಗೆ ಅನುದಾನ ಕೊಡಿಸಲು ತಾವು ಪ್ರಯತ್ನ ಮಾಡುವುದಾಗಿ ಭರವಸೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದಿಂದ ದೆಹಲಿ ಕರ್ನಾಟಕ ಸಂಘಕ್ಕೆ ವಸತಿ ನಿಲಯ ನಿರ್ಮಾಣ ಸಲುವಾಗಿ ಹದಿನೈದು ಕೋಟಿ ರೂ ಅನುದಾನ ಕೊಡಲು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಕರ್ನಾಟಕ ಸರ್ಕಾರದ ಬರುವ ಬಜೆಟ್‌ನಲ್ಲಿ ಪ್ರಸ್ತಾಪಿಸಿ, ಅನುಮೋದನೆ ಕೊಡಿಸಲು ಒಪ್ಪಿಗೆ ಸೂಚಿಸಿದ್ದಾರೆ.

ಆ ಒಂದು ಅಮೃತಘಳಿಗೆ ಈ ಅಮೃತ ಮಹೋತ್ಸವ ಸಂಭ್ರಮಾಚರಣೆ ವರ್ಷದಲ್ಲಿ ಬರಲೆಂದು ಕಾಯುತ್ತಿದ್ದೇವೆ. ಜೊತೆಗೆ ದೆಹಲಿಯಲ್ಲಿ ವಿದ್ಯಾರ್ಥಿಗಳಿಗಾಗಿ ಮತ್ತು ಬೇರೆ ಯಾರೇ ಕನ್ನಡಿಗರು ಬಂದಲ್ಲಿ ನಮ್ಮ ಶೈಲಿಯ ಊಟದ ವ್ಯವಸ್ಥೆ ಅತಿ ಕಡಿಮೆ ದರದಲ್ಲಿ ಸಿಗುತ್ತಿಲ್ಲ. ಆ ಕಾರಣಕ್ಕಾಗಿ ಸರ್ಕಾರಕ್ಕೆ ಶ್ರೀ ಬಸವರಾಜ ಹೊರಟ್ಟಿಯವರ ಮುಖಾಂತರ ಒಂದು ಮನವಿಯನ್ನು ಸಲ್ಲಿಸಿದ್ದೇವೆ ಇಂದಿರಾ ಕ್ಯಾಂಟೀನ್ ಮಾದರಿಯಲ್ಲಿ ದೆಹಲಿಯಲ್ಲಿರುವ ಮೂರು ಕರ್ನಾಟಕ ಭವನಗಳಲ್ಲಿ ಯಾವುದಾದರೂ ಒಂದು ಭವನದಲ್ಲಿ ಕಡಿಮೆ ಬೆಲೆಯಲ್ಲಿ ಊಟ ದೊರಕುವಂತೆ ಕ್ಯಾಂಟೀನ್ ವ್ಯವಸ್ಥೆಯಾದರೆ ಕನ್ನಡಿಗರಿಗೆ ಅನುಕೂಲವಾಗುತ್ತದೆ. ಸಾಧ್ಯವಾದರೆ ದೆಹಲಿ ಕರ್ನಾಟಕ ಸಂಘದಲ್ಲಿ ಜಾಗದ ವ್ಯವಸ್ಥೆಯನ್ನು ಕೊಡಲು ನಾವು ಒಪ್ಪಿಗೆ ಸಹ ನೀಡಿದ್ದೇವೆ. ಆದಷ್ಟು ಬೇಗನೆ ಈ ದಾಸೋಹ ಕಾರ್ಯಕ್ರಮ ನಮ್ಮ ಸಂಘದಲ್ಲಿ ಆಗಬೇಕೆಂಬುದು ನಮ್ಮೆಲ್ಲರ ಮನದಾಸೆ.

ಬಂಧುಗಳೇ, ಈ ವರ್ಷ ಮೊಟ್ಟ ಮೊದಲಿಗೆ ನಮ್ಮ ದೆಹಲಿ ಕರ್ನಾಟಕ ಸಂಘ ಕಟ್ಟಿದ ಎಲ್ಲಾ ಹಿರಿಯರನ್ನು ನೆನಪಿಸಿಕೊಂಡು ಹೊಸದಾಗಿ ಈ ಬಾರಿ ವರ್ಣರಂಜಿತ ಕ್ಯಾಲೆಂಡರ್ ತರುತ್ತಿದ್ದೇವೆ. ಎಲ್ಲಾ ಸದಸ್ಯರುಗಳಿಗೂ ಇದನ್ನು ನೀಡಲಾಗುವುದು. ಕಳೆದ ವರ್ಷದ ಅಂತ್ಯದಲ್ಲಿ ಕೊನೆಯ ಭಾನುವಾರ 'ಆರೋಗ್ಯ ಮತ್ತು ಆರೈಕೆ' ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಹಿರಿಯ ಆಯುರ್ವೇದ ವೈದ್ಯರಾದ ಡಾ. ಭೀಮ ಭಟ್ ಅವರ ಅಧ್ಯಕ್ಷತೆಯಲ್ಲಿ, ಕ್ಯಾನ್ಸರ್ ತಜ್ಞ ಡಾ. ನಿರಂಜನ್ ನಾಯ್ಕ್ ಹಾಗೂ ಹೃದಯ ತಜ್ಞ ಡಾ. ಪರ್ವತ ಗೌಡ ಇವರುಗಳು ಆರೋಗ್ಯ ಆರೈಕೆ ಬಗ್ಗೆ ಉಪನ್ಯಾಸ ನೀಡಿ ಅತ್ಯುತ್ತಮವಾದ ವಿಚಾರಗಳನ್ನು ದೆಹಲಿ ಎನ್.ಸಿ.ಆರ್. ಕನ್ನಡಿಗರಿಗೆ ತಿಳಿಸಿಕೊಟ್ಟಿದ್ದಾರೆ. ಜೊತೆಗೆ ಪ್ರತಿ ತಿಂಗಳು ಆರೋಗ್ಯ ಶಿಬಿರಗಳನ್ನು ದೆಹಲಿಯಲ್ಲಿರುವ ನಮ್ಮ ವೈದ್ಯಮಿತ್ರರುಗಳ ಜೊತೆ ಮಾತನಾಡಿ ಅವರ ಸಹಕಾರದೊಂದಿಗೆ ಈ ವರ್ಷ ಆಯೋಜಿಸಲಾಗುವುದು. ಆರೋಗ್ಯ ಮತ್ತು ಆರೈಕೆ ಈ ಕಾರ್ಯಕ್ರಮಕ್ಕೆ ಸಹಕರಿಸಿದ ಡಾ. ಭೀಮ ಭಟ್, ಡಾ. ನಿರಂಜನ್ ನಾಯ್ಕ್, ಡಾ ಪರ್ವತ ಗೌಡ ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ದಿನ ಸಂಜೆಗೆ ಹೊಚ್ಚ ಹೊಸ ಕನ್ನಡ ಚಲನಚಿತ್ರ ಪ್ರದರ್ಶನವನ್ನು ಸಹ ಮಾಡಲಾಯಿತು ಇದಕ್ಕೆ ಸಹಕರಿಸಿದ ಹೊಸ ಕನ್ನಡ ಚಲನ ಚಿತ್ರಗಳನ್ನು ನೀಡುತ್ತಿರುವ ನಮ್ಮ ಸ್ನೇಹಿತರು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಕೃಷ್ಣೇಗೌಡರಿಗೆ ಸಮಸ್ತ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ ಬರುವ ದಿನಗಳಲ್ಲಿ ಹೊಸ ಕನ್ನಡ ಚಲನ ಚಿತ್ರಗಳು ನಮಗೆ ಸಿಗಲೆಂದು ಆಶಿಸುತ್ತೇನೆ.

ಮಾನ್ಯರೇ, ಈ ಅಮೃತಮಹೋತ್ಸವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಪ್ರತಿವರ್ಷ ನೀಡುತ್ತಿರುವ ಪ್ರಶಸ್ತಿಗಳಾದ 'ಡಾ. ಸರೋಜಿನಿ ಮಹಿಷಿ ಪ್ರಶಸ್ತಿ', 'ಶಿವರಾಮ ಕಾರಂತ ಪ್ರಶಸ್ತಿ', 'ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ'ಗಳನ್ನು ಈ ವರ್ಷವೂ ಸಹ ನೀಡುತ್ತಿದ್ದೇವೆ. ಇದಕ್ಕಾಗಿ ಹಿರಿಯರನ್ನು ಒಳಗೊಂಡ ಒಂದು ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್. ನಾಗಾಭರಣ, ಪ್ರೊ. ಎಚ್.ಎಸ್. ಶಿವಪ್ರಕಾಶ್, ಶ್ರೀ ಶ್ರೀನಿವಾಸ್ ಕಪ್ಪಣ್ಣರವರುಗಳಿದ್ದು ಈ ಗಣ್ಯರು ಆಯ್ಕೆ ಮಾಡುವ ಮೂರು ಮಹನೀಯರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು.

ದೆಹಲಿ ಕರ್ನಾಟಕ ಸಂಘ ದೆಹಲಿಯಲ್ಲಿ ಮಾತ್ರ ಸ್ಥಾನದಲ್ಲಿದ್ದರೆ ದೆಹಲಿ ಮತ್ತು ಎನ್.ಸಿ.ಆರ್.ನ ವಿವಿಧ ಭಾಗಗಳಲ್ಲಿ ಅನೇಕ ಸ್ಥಳೀಯ ಸಂಘಗಳಿದ್ದು ಅದರಲ್ಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಒಂದಾಗಿದೆ. ಪದ್ಮ ಪ್ರಶಸ್ತಿ ಪಡೆದ ಕನ್ನಡಿಗರಿಗೆ ಅಭಿನಂದನಾ ಕಾರ್ಯಕ್ರಮ, ದೆಹಲಿಯಲ್ಲಿರುವ ಕನ್ನಡ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಆರ್ಥಿಕವಾಗಿ ಹಿಂದುಳಿದ 50 ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ಈ ಎಲ್ಲಾ ಕಾರ್ಯಕ್ರಮಗಳನ್ನು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಡಿಸೆಂಬರ್ 19ರಂದು ತನ್ನ 5ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಹಮ್ಮಿಕೊಂಡಿತ್ತು. ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಹಾಗು ಶ್ರೀ ಶ್ರೀ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿಗಳ ಆಶೀರ್ವಾದದೊಂದಿಗೆ ಅವರ ದಿವ್ಯ ಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯರಾದ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್, ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ಶೋಭಾ ಕರಂದ್ಲಾಜೆ ಮತ್ತು ಮಾನ್ಯ ಶ್ರೀ ರಾಜೀವ್ ಚಂದ್ರಶೇಖರ್ ಅವರು ಮುಖ್ಯ ಅತಿಥಿಗಳಾಗಿ ಭಾಗಿಯಾಗಿದ್ದರು. ಪದ್ಮಪ್ರಶಸ್ತಿ ಪುರಸ್ಕೃತ ಮಹನೀಯರಿಗೆ ಅಭಿನಂದನಾ ಕಾರ್ಯಕ್ರಮ ಕೊರೆಯುವ ಚಳಿಯಲ್ಲಿ ತುಂಬಾ ಸೊಗಸಾಗಿ ಮೂಡಿಬಂತು. ಈ ಕಾರ್ಯಕ್ರಮದ ಆಯೋಜಕರಾದ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ (ಡಿಸಿಪಿ) ಇವರಿಗೆ ಅಭಿನಂದನೆಗಳು,

ಸಹೃದಯಿ ಬಂಧುಗಳೇ, ಈ ವರ್ಷ ಅಮೃತ ಮಹೋತ್ಸವ ಸಂದರ್ಭದಲ್ಲಿ ಕೊರೊನಾ ನಿಯಮಾವಳಿಗಳನ್ನು ಪಾಲಿಸಿಕೊಂಡು ಎಲ್ಲ ಜಿಲ್ಲೆಯ ಜಿಲ್ಲಾವಾರು ಉತ್ಸವಗಳು ನಡೆಯುತ್ತವೆ, ನಿಮ್ಮ ಜಿಲ್ಲೆಗಳಲ್ಲಿ ಇರುವ ವೈಶಿಷ್ಟ್ಯತೆ ಮತ್ತು ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ವಿವರಗಳನ್ನು ಸಂಘಕ್ಕೆ ತಿಳಿಸಿ. ಎಲ್ಲ ಕನ್ನಡಿಗರು ಈ ಕಾರ್ಯಕ್ರಮಗಳ ಸದುಪಯೋಗವನ್ನು ಪಡೆಯಿರಿ.

**2022ರ ನವವರ್ಷ ಎಲ್ಲರ ಜೀವನದಲ್ಲಿ ಆರೋಗ್ಯ, ಸಮೃದ್ಧಿ ಮತ್ತು ಯಶಸ್ಸನ್ನು ತರಲೆಂದು ಶುಭ ಕೋರುತ್ತೇನೆ.**

***ಸಿ.ಎಂ. ನಾಗರಾಜ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯರೇ,

2021ನೇ ವರ್ಷಕ್ಕೆ ವಿದಾಯ ಹೇಳುತ್ತಾ, 2022ನೇ ವರ್ಷವನ್ನು ಸ್ವಾಗತಿಸುವ ಸಮಯ ಬಂದಿದೆ. ಇದರೊಂದಿಗೆ, ನಮ್ಮೆಲ್ಲ ದೆಹಲಿ ಕನ್ನಡಿಗರ ಗೌರವವಾದ ದೆಹಲಿ ಕರ್ನಾಟಕ ಸಂಘ ತನ್ನ ಸ್ಥಾಪನೆಯ 74 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿ-75ನೇ ವರ್ಷಕ್ಕೆ ಕಾಲಿಡುತ್ತಿರುವ ಸುಸಂದರ್ಭವೂ ಹೌದು. ಇದರೊಂದಿಗೆ ಈ "ಅಮೃತ ಮಹೋತ್ಸವ" ವರ್ಷವನ್ನು ಸಂಘದ ಇತಿಹಾಸದ ಪುಟಗಳಲ್ಲಿ ಸ್ಮರಣೀಯವಾಗಿಸುವ ಮಹತ್ತರವಾದ ಜವಾಬ್ದಾರಿ ನಮ್ಮಗಳ ಮೇಲಿದೆ. ದೆಹಲಿ ಕರ್ನಾಟಕ ಸಂಘದ ಅಸ್ತಿತ್ವ, ಗೌರವ ಹಾಗೂ ಗರಿಮೆಯನ್ನು ಇಡೀ ರಾಜ್ಯ-ರಾಷ್ಟ್ರದಾದ್ಯಂತ ಪಸರಿಸುವ ಕಾರ್ಯಕ್ರಮಗಳ ಆಯೋಜನೆ, ರಾಷ್ಟ್ರದ ವಿವಿಧ ಕನ್ನಡ ಸಂಸ್ಥೆಗಳೊಂದಿಗೆ ಸಹಕಾರ-ಸಂಪರ್ಕ ಕಾರ್ಯಕ್ರಮಗಳೊಂದಿಗೆ, ರಾಜ್ಯದ ವಿವಿಧ ಜಿಲ್ಲೆಗಳ ವೈವಿಧ್ಯಮಯ-ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳ ಆಯೋಜನೆಯೊಂದಿಗೆ ಅಮೃತ ಮಹೋತ್ಸವವನ್ನು ಯಶಸ್ವಿಯಾಗಿ ಆಚರಿಸಲು ನಮ್ಮ ತಂಡ ಈಗಾಗಲೇ ಕಾರ್ಯಪ್ರವೃತ್ತವಾಗಿದೆ. ಈ ಮಹತ್ತರ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ತಮ್ಮಗಳ ಸಹಾಯ-ಸಹಕಾರ ಹಾಗೂ ಮಾರ್ಗದರ್ಶನ ಅತ್ಯವಶ್ಯ. ಆದರೆ, ನಮ್ಮೆಲ್ಲಾ ಆಸೆಗಳಿಗೆ ತಣ್ಣೀರೆರಚುವಂತೆ, ಮೊದಲ ಹೆಜ್ಜೆಗೂ ಮೊದಲೇ "ಹೋದೆಯಾ ಪಿಶಾಚಿ ಅಂದ್ರೆ, ಬಂದೆ ಗವಾಕ್ಷಿಯಲ್ಲಿ" ಎಂಬ ನಾಣ್ಣುಡಿಯಂತೆ ನಮ್ಮ ಜೀವನಗಳ ನಡೆಗೆ ಬ್ರೇಕ್ ಹಾಕಲೆಂದು ಮತ್ತೊಮ್ಮೆ ಕೊರೊನಾ ಮಹಾಮಾರಿ ಬಂದಿದೆ. ಈಗಾಗಲೇ ದಿನಪ್ರತಿ ದೆಹಲಿಯಲ್ಲಿ 4000 ಕೇಸುಗಳು ದಾಖಲಾಗುತ್ತಿವೆ, ಮುಂದಿನ ದಿನಗಳಲ್ಲಿ ಸರ್ಕಾರ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.

ದಯವಿಟ್ಟು ಸರ್ಕಾರದ ಕೋವಿಡ್ ನಿಯಮಗಳನ್ನು ಅಕ್ಷರಶಃ ಪಾಲಿಸಿರಿ, ಜಾಗರೂಕರಾಗಿರಿ, ತಾವು ಸುರಕ್ಷಿತವಾಗಿರಿ, ತಮ್ಮ ಪ್ರೀತಿ ಪಾತ್ರರನ್ನು ಸುರಕ್ಷವಾಗಿರಿಸಿ, ತಮ್ಮೆಲ್ಲರಲ್ಲಿ ನನ್ನ ಕಳಕಳಿಯ ಪ್ರಾರ್ಥನೆ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ

### ಪ್ರಧಾನ ತಾಂತ್ರಿಕ ವಿಶ್ಲೇಷಕ ಹುದ್ದೆಗೆ ಹರಿಪ್ರಿಯ ಎಸ್. ಅವರಿಗೆ ಪದೋನ್ನತಿ



ರಕ್ಷಣಾ ಮಂತ್ರಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ದೆಹಲಿ ಕನ್ನಡಿಗ ಹರಿಪ್ರಿಯ ಎಸ್ ಅವರು ಜಂಟಿ ನಿರ್ದೇಶಕ ಹುದ್ದೆಗೆ ಸಮಾನವಾಗಿರುವ ಪ್ರಧಾನ ತಾಂತ್ರಿಕ ವಿಶ್ಲೇಷಕ ಹುದ್ದೆಗೆ ಡಿ.20 ರಂದು ಮುಂಬಡ್ತಿ ಹೊಂದಿದ್ದಾರೆ.

ಮೂಲತಃ ಮೈಸೂರಿನವರಾದ ಹರಿಪ್ರಿಯ ಎಸ್ ಇವರು ಮೈಸೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದಾರೆ. ಎಚ್.ಎ.ಎಲ್. ಕಂಪ್ಯೂಟರ್ ಸಲ್ಯೂಷನ್ಸ್ ಸೇರಿದಂತೆ ಹಲವಾರು ಸಾಫ್ಟ್‌ವೇರ್ ಕಂಪನಿಗಳಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಕೆಲಸ ನಿರ್ವಹಿಸಿದ ಇವರು ಒಂದು ವರ್ಷ ಕಾಲ ಉಪನ್ಯಾಸಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

2007ರ ಜನವರಿಯಿಂದ ರಕ್ಷಣಾ ಮಂತ್ರಾಲಯದಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ಇವರು ಸಾಂಸ್ಕೃತಿಕವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ದೆಹಲಿಯ ಕನ್ನಡಿಗರ ವಲಯದಲ್ಲಿ ಚಿರಪರಿಚಿತರಾಗಿದ್ದಾರೆ. ಇವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು. □

*ಎ.ಟಿ. ಶ್ರೀನಿವಾಸ್*

### ಪ್ರೊ. ರಂಗನಾಥ್ ಸಿಂಗಾರಿ ಅವರಿಗೆ 'ಸ್ವಾಭಿಮಾನ್ ಅವಾರ್ಡ್-2021' ಪ್ರಧಾನ

ದೆಹಲಿ ಕೌನ್ಸಿಲ್ ಆಫ್ ವೆಲ್ಫೇರ್ ಆಫ್ ಸ್ಪೋರ್ಟ್ಸ್‌ಮನ್ ಮತ್ತು ಕೌನ್ಸಿಲ್ ಫಾರ್ ಅಥ್ಲೀಟ್ಸ್ ಸಂಸ್ಥೆಯು ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದ ಅಭಿಕಲ್ಪ (ಡಿಸೈನ್) ವಿಭಾಗದ ಮುಖ್ಯಸ್ಥರಾದ ಪ್ರೊ. ರಂಗನಾಥ್ ಸಿಂಗಾರಿ ಅವರ ಅತ್ಯುತ್ತಮ ಶಿಕ್ಷಣ ಮಾರ್ಗದರ್ಶಕ ಸೇವೆಯನ್ನು ಪರಿಗಣಿಸಿ, ಸ್ವಾಭಿಮಾನ್ ಅವಾರ್ಡ್-2021ರ ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡಿದೆ.

ಪ್ರಶಸ್ತಿಯನ್ನು ದೆಹಲಿ ಕೌನ್ಸಿಲ್ ಆಫ್ ವೆಲ್ಫೇರ್ ಆಫ್ ಸ್ಪೋರ್ಟ್ಸ್‌ಮನ್ ಮತ್ತು ಕೌನ್ಸಿಲ್ ಫಾರ್ ಅಥ್ಲೀಟ್ಸ್ ಅಧ್ಯಕ್ಷರಾದ ತಿಲಕರಾಜ್ ಮಲೀಕ್ ಅವರಿಂದ ನವದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರೊ. ರಂಗನಾಥ್ ಸಿಂಗಾರಿ ಅವರು ಸ್ವೀಕರಿಸಿರುತ್ತಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು. □






ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಆಹಾರ ಮೇಳದ ಸಂದರ್ಭದಲ್ಲಿ ಕುಮಾರಿ ಓಶಿನ್ ಮುರಗೋಡ ಅವರಿಂದ ಮಕ್ಕಳ ದಿನಾಚರಣೆಯ ಅಂಗವಾಗಿ ಸ್ವರಚಿತ ಚಿತ್ರಗಳ ಪ್ರದರ್ಶನ

# ಜೀವನದಲ್ಲಿ ಆರೋಗ್ಯಯುತವಾದ ಶಿಸ್ತನ್ನು ರೂಢಿಸಿಕೊಳ್ಳಬೇಕು- ಡಾ. ಭೀಮಾ ಭಟ್



ದಿನನಿತ್ಯದ ಜೀವನದಲ್ಲಿ ನಮ್ಮ ಆರೋಗ್ಯ ದಿನಚರಿ ಹೇಗಿರಬೇಕೆಂಬ ಪರಿಕಲ್ಪನೆ ಹೊಂದಬೇಕಾದದ್ದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ಇದನ್ನು ಮೈಗೂಡಿಸಿಕೊಂಡು ಆರೋಗ್ಯವಂತ ಜೀವನ ನಡೆಸಬೇಕು. ಜೀವನದಲ್ಲಿ ಆರೋಗ್ಯಯುತವಾದ ಶಿಸ್ತನ್ನು ರೂಢಿಸಿಕೊಳ್ಳಬೇಕು ಎಂದು ಆರೋಗ್ಯ-ಆರೈಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ, ಗುರುಗಾಂವ್ ಮೇದಾಂತ ಆಯುರ್ವೇದ ಕೇಂದ್ರದ ನಿರ್ದೇಶಕರೂ ಆಗಿರುವ ಡಾ. ಭೀಮ ಭಟ್ ಅವರು ತಿಳಿಸಿದರು. ಅವರು ದೆಹಲಿ ಕರ್ನಾಟಕ ಸಂಘವು ದಿನಾಂಕ 26.12.2021ರಂದು ಸಂಘದ ವಿಚಾರ ಸಂಕಿರಣ ಭವನದಲ್ಲಿ ಆಯೋಜಿಸಿದ್ದ 'ಆರೋಗ್ಯ ಮತ್ತು ಆರೈಕೆ' ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ನಮ್ಮ ಆಹಾರ ಕ್ರಮ, ದೈಹಿಕ ಶ್ರಮ, ಜೀವನ ಶಿಸ್ತು, ಮಾನಸಿಕ ಸ್ವಾಸ್ಥ್ಯ, ಮುಖ್ಯವಾಗಿ ದೈಹಿಕ ಹಾಗೂ ಬೌದ್ಧಿಕ ಶಿಸ್ತು ರೂಢಿಸಿಕೊಂಡಿದ್ದಾದರೆ, ಯಾವ ರೋಗವೂ ಹತ್ತಿರ ಸುಳಿಯುವುದೇ ಇಲ್ಲ. ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ ಎಂಬಂತೆ, ಆರೋಗ್ಯವೇ ಭಾಗ್ಯ ಎಂದರಿತು ಆ ದಿಸೆಯಲ್ಲಿ ಆರೋಗ್ಯದ ಅನುಸರಣಾ ಕ್ರಮಗಳನ್ನು ತಿಳಿದುಕೊಳ್ಳಬೇಕು ಎಂದು ತಿಳಿಸಿದರು.

ಕೊರೊನಾದಂತಹ ಕ್ಲಿಷ್ಟಕರ ಹಾಗೂ ಕಷ್ಟಕರ ಸಂದರ್ಭದಲ್ಲಿ ವೈದ್ಯಕೀಯ ಜಗತ್ತು ಹಗಲಿರುಳು ಶ್ರಮಿಸುತ್ತಿದೆ. ಕೊರೊನೋತ್ತರದ ಸಂದರ್ಭ ವೈದ್ಯ ಲೋಕ ಕೊರೊನಾವನ್ನು ಕಟ್ಟಿಹಾಕುವ ದಿಸೆಯಲ್ಲಿ ಸಂಶೋಧನೆ ಇತ್ಯಾದಿ ಕೈಗೊಂಡಿದೆ. ಆಯುರ್ವೇದ ಬಹಳ ಪುರಾತನವಾದದ್ದು, ಓಲ್ಡ್ ಇಸ್ ಗೋಲ್ಡ್ ತರಹ. ಮೊದಲು 'ರೋಗಿ ಆಮೇಲೆ ರೋಗ' ಓರ್ವ ರೋಗಿ ಕ್ಯಾನ್ಸರ್ ನಿಂದ ಬಳಲುತ್ತಿದ್ದರೆ, ಅವನ ದೇಹದ ಪ್ರಕೃತಿಯ ಬಗ್ಗೆ ಮೊದಲು ತಿಳಿದುಕೊಳ್ಳುವುದು ಅವಶ್ಯಕ. ವ್ಯಕ್ತಿ ರೋಗದಿಂದ ಬಳಲುತ್ತಿದ್ದರೆ, ಅದರ ಮೂಲ ಅರ್ಥ ಮಾಡಿಕೊಂಡಿದ್ದಾದರೆ, ರೋಗ ಗುಣವಾಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ತಿಳಿದುಕೊಳ್ಳಲು ಸಹಾಯಕಾರಿ. ಸಂಕ್ಷೇಪತಃ ಕ್ರಿಯಾಯೋಗೋ ನಿಧಾನೋ ನಿಧಾನ ಪರಿವರ್ಜನಂ ಎಂದು ಉಲ್ಲೇಖಿಸಿದರು.

ರೋಗವನ್ನು ಅದರ ಮೂಲದಲ್ಲಿಯೇ ಗುರುತಿಸಿ, ಅಗತ್ಯ ವೈದ್ಯಕೀಯ ಚಿಕಿತ್ಸೆ ನೀಡಿದ್ದಾದರೆ, ಯಾವುದೇ ರೋಗವನ್ನು ಪ್ರಥಮ ಹಂತದಲ್ಲಿಯೇ ಗುಣಪಡಿಸಲು ಸಾಧ್ಯವಿದೆ. ಆಯುರ್ವೇದದಲ್ಲಿ ವಾತ, ಪಿತ್ತ ಹಾಗೂ ಕಫಗಳೆಂಬ ಮೂರು ರೀತಿ ದೇಹ ಪ್ರಕೃತಿಗಳಿವೆ. ಇದರ ಬಗ್ಗೆಯೂ ಜೆನೆಟಿಕ್ ವಿಶ್ಲೇಷಣೆ ಕೈಗೊಂಡಿದ್ದು, ನೂರಕ್ಕೆ ನೂರರಷ್ಟು ಪ್ರಕೃತಿಯ ಬಗ್ಗೆ ಸಂಶೋಧನೆಯನ್ನು ಸಹ ಮಾಡಲಾಗಿದೆ. ಆಯುರ್ವೇದ ಮೂರು ವಿಭಾಗಗಳಲ್ಲಿ ವಾತ, ಪಿತ್ತ ಹಾಗೂ ಕಫ ದೋಷಗಳ ವ್ಯಾಧಿ ಉತ್ಪನ್ನಕ್ಕೆ ಕಾರಕ ಅಂಶಗಳನ್ನು ತಿಳಿಸಿ ಕಷ್ಟವಾದದ್ದನ್ನು ಸರಳಗೊಳಿಸಿದೆ. ಯಾವ ಪ್ರಕೃತಿಗೆ ಯಾವ ರೋಗ ಉತ್ಪತ್ತಿಗೆ ಪೂರಕವಾದ ಅಂಶಗಳನ್ನು ತಿಳಿದುಕೊಂಡು ಕಾಯಿಲೆ ಬಂದ ಮೇಲೆ ಚಿಂತಿಸುವುದಕ್ಕಿಂತ ರೋಗ ಬರದಂತೆ ಎಚ್ಚರ ವಹಿಸುವುದು ಜಾಣ ನಡೆ ಎಂದರು.

ನಮ್ಮ ಹಿರಿಯರು 'ಶತಮಾನಂ ಭವತಿ' ಎಂದು ಕಿರಿಯರಿಗೆ ಆರೋಗ್ಯಪೂರ್ಣವಾಗಿ ಸರಿಯಾದ ಕ್ರಮದಲ್ಲಿ ಜೀವನ ನಡೆಸಿ, ನೂರು ವರ್ಷಗಳ ಆಯುಷ್ಯ ನಿಮ್ಮದಾಗಲಿ ಎಂಬ ಹಾರೈಕೆಯೊಂದಿಗೆ ಹರಸಿ ಆಶೀರ್ವದಿಸುತ್ತಿದ್ದರು. ಆಯುರ್ವೇದವು ಸಾವಿರಾರು ವರ್ಷಗಳಿಂದಲೂ ಇದೆ ಮುಂದೆಯೂ ಇರುತ್ತದೆ. ಸೃಷ್ಟಿಯು ಇದುವರೆಗೆ ಎಂಭತ್ನಾಲ್ಕು ಲಕ್ಷ ಜೀವ ರಾಶಿಗಳಿಗೆ ಆಯುಷ್ಯ ನಿಗದಿಪಡಿಸಿದ್ದು, ಅದರ ಬಳಕೆ ನಮ್ಮ ಕೈಯಲ್ಲಿದೆ.

'ಶರೀರ ಮಾಧ್ಯಂ ಖಲು ಧರ್ಮ ಸಾಧನಂ' ಎಂಬಂತೆ ಮನುಷ್ಯನ ಜೀವವು ಆತ್ಮ, ಮನಸ್ಸು ದೇಹವನ್ನು ಹೊಂದಿದೆ. ಇವು ಪ್ರತ್ಯೇಕವಿದ್ದರೂ ದೇಹದೊಳಗೆ ಇವೆಲ್ಲವೂ ಬೆಸೆದುಕೊಂಡಿವೆ. ಇವು ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತವೆ. ಇವುಗಳ ನಡುವೆ ಸೌಹಾರ್ದ ಮತ್ತು ಸಮತೋಲನವನ್ನು ಕಾಣಬಹುದು. ಒಂದಕ್ಕೇನಾದರೂ ತೊಂದರೆಯಾದರೆ ಎಲ್ಲಾ ಅಂಗಗಳ ನಡುವಿನ ಸಂಬಂಧ ಮುರಿದು ಬೀಳುತ್ತದೆ ಎಂದರು. ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಅನುಸರಿಸುವ ನಿಯಮಗಳನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶೇಷ ಉಪನ್ಯಾಸ ನೀಡಿದ ನವದೆಹಲಿಯ ಡಾ. ರಾಮಮನೋಹರ ಲೋಹಿಯಾ ಆಸ್ಪತ್ರೆಯ ಹೃದ್ರೋಗ ತಜ್ಞ ವೈದ್ಯ ಡಾ. ಪರ್ವತ ಗೌಡ ಅವರು ಮಾತನಾಡಿ, ಆರೋಗ್ಯವೇ ಭಾಗ್ಯ, ಆರೋಗ್ಯವಂತರಾಗಿ ಬಾಳಲು ಅನುಸರಿಸುವ ನಿಯಮಗಳನ್ನು ಬಹು ಸವಿಸ್ತಾರವಾಗಿ ತಿಳಿಸಿಕೊಟ್ಟರು. ಹೃದಯವು ನಮ್ಮ ದೇಹದ ಪ್ರಮುಖ ಭಾಗ. ಒತ್ತಡದ ಜೀವನಶೈಲಿಯಿಂದಾಗಿ ಅನಾರೋಗ್ಯಯುಂಟಾಗುತ್ತದೆ. ಅನಾರೋಗ್ಯಕರ ಆಹಾರ ತ್ಯಜಿಸಿ, ಪೌಷ್ಟಿಕಾಂಶಗಳುಳ್ಳ ಆಹಾರ ಸೇವಿಸಬೇಕು. ನೃತ್ಯ, ಈಜು, ಜಾಗಿಂಗ್ ನಡಿಗೆ / ವ್ಯಾಯಾಮದಂತಹ ದೈಹಿಕ ಶ್ರಮದ ಅವಶ್ಯಕತೆ ಕುರಿತು ಹೇಳಿದರು. ದೇಹ ಮತ್ತು ಮನಸ್ಸನ್ನು ಸದೃಢವಾಗಿಸಲು ಇದು ಅಗತ್ಯ. ಇವುಗಳನ್ನು ನಿಯಮಿತವಾಗಿ ಅನುಸರಿಸುವುದರಿಂದ ಮಾಂಸ ಖಂಡಗಳನ್ನು ಬಲಿಷ್ಠಗೊಳಿಸುವುದಲ್ಲದೇ, ದೈಹಿಕ ಮಾನಸಿಕ ಸಮೃದ್ಧಿ ನೀಡುತ್ತದೆ. ಇದರಿಂದ ಹೃದಯ ರೋಗದಿಂದ ದೂರ ಇರಬಹುದು. ಒಂದೇ ಸಮಯದಲ್ಲಿ ಆಗದಿದ್ದರೆ ಬೆಳಿಗ್ಗೆ ಮಧ್ಯಾಹ್ನ ಅಥವಾ ಸಾಯಂಕಾಲ ಸಮಯ, ವಯಸ್ಸಿಗನುಗುಣವಾಗಿ ಕ್ರಮವರಿತು ಅನುಸರಿಸಬಹುದಾಗಿದೆ. ಸಾಧ್ಯವಾದಷ್ಟು ಲಿಫ್ಟ್ ಬದಲು ಮೆಟ್ಟಿಲು ಬಳಸುವಂತೆಯೂ ಅವರು ಸೂಚಿಸಿದರು. ಉತ್ತಮ ಆರೋಗ್ಯ ಪಡೆದುಕೊಂಡು ಸುಖಿಯಾಗಿ ಬಾಳುವ ಆರೋಗ್ಯ ಸೂತ್ರಗಳನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಮತ್ತೊಬ್ಬ ಕನ್ನಡಿಗ ವೈದ್ಯ ಗುರುಗಾಂವ್ ಫೋರ್ಟಿಸ್ ಮೆಮೋರಿಯಲ್ ರೀಸರ್ಚ್ ಸೆಂಟರ್‌ನ ಬ್ರೆಸ್ಟ್ ಅಂಡ್ ಗ್ಯಾಸ್ಟ್ರೋ ಇಂಟೆಸ್ಟಿನಲ್ ಆಂಕೋ ಸರ್ಜರಿ ನಿರ್ದೇಶಕರಾಗಿರುವ ಕ್ಯಾನ್ಸರ್ ತಜ್ಞ ಡಾ. ನಿರಂಜನ್ ನಾಯ್ಕ್ ಅವರು ತಮ್ಮ ಉಪನ್ಯಾಸದಲ್ಲಿ ಸಾಂಕ್ರಾಮಿಕ ರೋಗ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳು ಹಾಗು ರೋಗ ಬರುವ ಕಾರಣಗಳು ಅವುಗಳಿಂದ ನಾವು ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳು ಹಾಗು ಸಮತೋಲಿತ ಆಹಾರಗಳ ಬಗ್ಗೆ ವಿವರ ನೀಡಿ ಆರೋಗ್ಯವಂತ ಜೀವನ ನಿರ್ವಹಣೆಯ ಕುರಿತು ತಿಳಿಸಿಕೊಟ್ಟರು. ಡಾ. ನಿರಂಜನ್ ನಾಯ್ಕ್‌ರವರು ಮಹಿಳೆಯರಲ್ಲಿ ಮತ್ತು ಪುರುಷರಲ್ಲಿ ಬರಬಹುದಾದ ವಿವಿಧ ಕ್ಯಾನ್ಸರ್ ರೋಗಗಳು, ಅದರ ಕಾರಣಗಳು, ಲಕ್ಷಣಗಳು ಮತ್ತು ಅವುಗಳ ಟ್ರೀಟ್‌ಮೆಂಟ್ ಬಗ್ಗೆ ವಿವರಿಸಿದರು.

ಆರೋಗ್ಯ ಮತ್ತು ಆರೈಕೆ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ, ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗು ಹೆಚ್ಚಿನ ಸಂಖ್ಯೆಯಲ್ಲಿ ದೆಹಲಿ, ಎನ್.ಸಿ.ಆರ್.ನ ಕನ್ನಡಿಗರು ಭಾಗವಹಿಸಿ ತಜ್ಞ ವೈದ್ಯತ್ರಯರೊಂದಿಗೆ ಪ್ರಶ್ನೋತ್ತರದಲ್ಲಿ ಪಾಲ್ಗೊಂಡರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಸ್. ಮೂರ್ತಿ, ಶ್ರೀಮತಿ ಸವಿತಾ ನೆಲ್ಲಿ ಮತ್ತು ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ತಜ್ಞ ವೈದ್ಯರುಗಳನ್ನು ಪರಿಚಯಿಸಿದರು. ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಉಪನ್ಯಾಸ ಕಾರ್ಯಕ್ರಮದ ನಂತರ, ಜನಪ್ರಿಯ ಚಿತ್ರನಟ ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅಭಿನಯದ 'ಭಜರಂಗಿ-2' ಹೊಚ್ಚ ಹೊಸ ಕನ್ನಡ ಚಲನಚಿತ್ರವನ್ನು ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಲಾಯಿತು. ದೆಹಲಿ ಎನ್.ಸಿ.ಆರ್.ನ ಕನ್ನಡಿಗರು ಚಲನಚಿತ್ರ ವೀಕ್ಷಿಸಿ ಸಂತಸ ವ್ಯಕ್ತಪಡಿಸಿದರು. □

**ಅಭಿಮತ ವರದಿ**

# ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದಿಂದ ವಿಶ್ವಮಾನವ ದಿನಾಚರಣೆ

ವಿಶ್ವಮಾನವ ಸಂದೇಶ ಸಾರಿದ, ಕನ್ನಡಕ್ಕೆ ಪ್ರಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ, ಕರ್ನಾಟಕ ರತ್ನ ರಾಷ್ಟ್ರಕವಿ ಕುವೆಂಪು ಅವರ 118ನೇ ಜನ್ಮ ದಿನಾಚರಣೆ ಪ್ರಯುಕ್ತ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು(ರಿ), ದೆಹಲಿ ಪ್ರದೇಶ ಘಟಕವು "ಕುವೆಂಪು ನುಡಿನಮನ" ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಹಕಾರದಲ್ಲಿ 29 ಡಿಸೆಂಬರ್ 2021ರಂದು ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಹಮ್ಮಿಕೊಂಡಿತ್ತು.

ಕುವೆಂಪು ವೇಷಧಾರಿಯಾಗಿ ಕುಮಾರ್ ಕಾವ್ಯಾಂಶ್ ಜೊತೆಯಲ್ಲಿ ಕುಮಾರಿ ಶ್ರೇಷ್ಠ ತೇಲಿ ಅವರು ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದರು. ಈ ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕವೂ ಭಾಗಿಯಾಗಲು ಅವಕಾಶ ಮಾಡಿಕೊಡಲಾಗಿತ್ತು.

ನುಡಿನಮನ ಅರ್ಪಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರು ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಶಶಿಕುಮಾರ್ ಅವರು ದೆಹಲಿಯಂತಹ ಹೊರ ರಾಜ್ಯದಲ್ಲಿರುವ ಕನ್ನಡಿಗರ ಮಕ್ಕಳಲ್ಲಿ ಕನ್ನಡ ಭಾಷಾಭಿಮಾನ ಹಾಗೂ ಸಾಹಿತ್ಯ ಅಭಿರುಚಿ ಬೆಳೆಸುವ ಮೂಲ ಉದ್ದೇಶವನ್ನು ಇಟ್ಟುಕೊಂಡು ಮಕ್ಕಳ ಸಾಹಿತ್ಯ ಪರಿಷತ್ತು ಪ್ರತೀ ತಿಂಗಳು ನಾನಾವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಕುವೆಂಪುರವರ "ಓ ನನ್ನ ಚೇತನ ಆಗು ನೀ ಅನಿಕೇತನ" ಎನ್ನುವ ಆಶಯವನ್ನು ಹೊತ್ತು ಮುನ್ನಡೆಯುತ್ತಿರುವುದು ಮಕ್ಕಳ ಪಾಲಿಗೆ ಬೆಳಕನ್ನು ಚೆಲ್ಲುತ್ತಿದೆ ಹಾಗೂ ಇದು ಕನ್ನಡಿಗರ ಸೌಭಾಗ್ಯವೇ ಆಗಿದೆ ಎಂದರು. ವಿಶ್ವ ಮಾನವ ಕುವೆಂಪು ಅವರ ಜೀವನ, ವ್ಯಕ್ತಿತ್ವ, ಕೃತಿಗಳು, ಪ್ರಶಸ್ತಿಗಳು ಹಾಗೂ ಸಾಕಷ್ಟು ವಿಚಾರಗಳನ್ನು ವಿವರವಾಗಿ ಮಕ್ಕಳಿಗೆ ಹೇಳಿದರು.

ಮುಖ್ಯ ಅತಿಥಿಯಾಗಿ ಬೆಂಗಳೂರಿನಿಂದ ಭಾಗವಹಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಖ್ಯಾತ ಸಾಹಿತಿಗಳೂ, ಚಲನಚಿತ್ರ ನಿರ್ದೇಶಕರೂ ಆದ ಶ್ರೀ ಟಿ.ಎಸ್. ನಾಗಾಭರಣ ಅವರು ಮಾತನಾಡಿ ಈ ದಿನವನ್ನ ಕೇವಲ ಕರ್ನಾಟಕವಲ್ಲ ಎಲ್ಲ ಕಡೆ ಇರುವ ಇಡೀ ಕನ್ನಡ ಮನಸ್ಸುಗಳು ನೆನೆಯಬೇಕು, ಇಂದು ನಮ್ಮಲ್ಲಿ ಪ್ರೇರಕ ಶಕ್ತಿಯಾಗಿ ಬೆರೆತು ಹೋಗಿರುವ ಒಬ್ಬ ಅಕ್ಷರ ಸಂತನನ್ನ ಕರ್ನಾಟಕ ಅಸ್ಮಿತೆಯಾಗಿ ಸ್ವೀಕರಿಸಿದೆ. ಎಲ್ಲರ ಮನಸ್ಸುಗಳಲ್ಲಿ ಇಂದು ಕುವೆಂಪು ಚಿರಸ್ಥಾಯಿ. ಎಲ್ಲಿಯವರೆಗೆ ಕನ್ನಡ, ಕರ್ನಾಟಕ ಇರುತ್ತದೆ ಎಲ್ಲಿಯವರೆಗೆ ಕನ್ನಡ ಮನಸ್ಸುಗಳು ಅವರನ್ನ ಚಿಂತಿಸುತ್ತಾರೋ ಅಲ್ಲಿಯವರೆಗೆ ಅವರು ಚಿರಾಯು. ಮಕ್ಕಳಿಗಾಗಿ ಕುವೆಂಪು ಅವರು ಅವರದೇ ಆದ ಒಂದು ಶೈಲಿ ರೂಪಿಸಿಕೊಂಡಿದ್ದರು. ಅದಕ್ಕೆ ನನ್ನ ಗೋಪಾಲ, ಮೂಡಣ್ಣನ ತಮ್ಮ ಶಿಶು ನಾಟಕಗಳು ಸಾಕ್ಷಿ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಕುವೆಂಪು ಅವರು ಬರೆಯದೆ ಇರದ ಸಾಹಿತ್ಯ ಪ್ರಕಾರಗಳೇ ಇಲ್ಲ. "ಮನುಜ ಮತ ವಿಶ್ವ ಪಥ" ಇವತ್ತಿಗೆ ಎಷ್ಟು ಸರಿಯಾದ ಮಾತು ನಮ್ಮ ಸುತ್ತ ಮುತ್ತ ಏನೇನು ಶೋಭೆಗಳಿವೆ ಎಷ್ಟು ಆತಂಕಗಳಿವೆ, ಆ ಆತಂಕದ ಮಧ್ಯೆ ವಿಶ್ವ ಮಾನವನಾಗಬೇಕಾದರೆ ಹೇಗೆ ಎಲ್ಲರನ್ನ ಒಳಗೊಳ್ಳುವ ಕ್ರಿಯೆಯನ್ನ ಕನ್ನಡ ಮನಸ್ಸುಗಳು ಸಾವಿರಾರು ವರ್ಷಗಳಿಂದ



ಮಾಡಿಕೊಂಡು ಬಂದಿವೆ. ಯುಗದ ಕವಿ ಜಗದ ಕವಿ ಕುವೆಂಪುರವರು ಅಂದಿನ ಕಾಲದಲ್ಲಿ ಹೇಗೆ ವಿಶ್ವಮಾನವ ಸಂದೇಶವನ್ನ ಜಗಕ್ಕೆ ಕೊಟ್ಟರೋ ಹಾಗೆ ಕನ್ನಡ ಕುಲಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟರು. ಇಂಪಾದ ಹೆಸರು ಕುವೆಂಪು ಈ ಹೆಸರಿನಲ್ಲಿ ಮೈ ಜುಮ್ಮೆನ್ನುವ, ಮನಸ್ಸಿಗೆ ಹುರುಪನ್ನು ತುಂಬುವ ಶಕ್ತಿ ಇದೆ ಎಂದು ಹೇಳಿದರು. ಕರ್ನಾಟಕಕ್ಕೆ ಗಡಿ ಇದೆ ಆದರೆ ಕನ್ನಡಕ್ಕೆ ಗಡಿ ಇದೆಯೇ? ದೆಹಲಿ, ಹರಿಯಾಣದ ಮಕ್ಕಳು ಮತ್ತು ಎಲ್ಲಾ ಕನ್ನಡ ಮನಸ್ಸುಗಳನ್ನು ಒಗ್ಗೂಡಿಸಿ ಇಂತಹ ಕೆಲಸವನ್ನ ಮಕ್ಕಳ ಸಾಹಿತ್ಯ ಪರಿಷತ್ತು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಬೆಳಗಾವಿಯ ಹಿರಿಯ ಸಾಹಿತಿ ಡಾ. ವಿ.ಎಸ್. ಮಾಳಿ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ "ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಲ್ಲಿ ಕನ್ನಡವನ್ನು ಮಾತನಾಡುವರೋ, ಎಲ್ಲಿ ಕನ್ನಡಿಗರು ಕನ್ನಡವನ್ನ ಬೆಳೆಸುವರೋ ಅವರೆಲ್ಲರೂ ಕಲ್ಪತರುವವರು. ಕುವೆಂಪು ಮಕ್ಕಳಲ್ಲಿ ದೇವರನ್ನ ಕಂಡಂತಹ ಕವಿ. ಕುವೆಂಪು ಆರಂಭದಲ್ಲಿ ಮಕ್ಕಳ ಕವಿತೆಗಳಲ್ಲಿ ತಮ್ಮ ಸಾಹಿತ್ಯ ಯಾನವನ್ನು ಆರಂಭ ಮಾಡಿದವರು. ಕನ್ನಡಕ್ಕೆ ಪ್ರಥಮ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದವರು. ಕನ್ನಡಕ್ಕೆ ಬಂದ ಪ್ರಶಸ್ತಿಗಳಲ್ಲಿ ಮೊದಲಿಗರು ಕುವೆಂಪು. ಅವರು ಪ್ರಶಸ್ತಿಗಳಿಗೆ ಆಸೆ ಪಟ್ಟವರಲ್ಲ. ಕೀರ್ತಿಯನ್ನ ಶನಿ ಎಂದವರು, ಯಾವಾಗಲೂ ಏಕಾಂತವನ್ನ ಬಯಸಿದವರು, ಕೊನೆಯ ಸಂದರ್ಭದಲ್ಲಿಯೂ ಅವರು ಮಲೆನಾಡಿಗಾಗಿ ತುಡಿತವನ್ನು ವ್ಯಕ್ತಪಡಿಸಿದರು. ಕನ್ನಡವನ್ನ ರಾಷ್ಟ್ರಮಟ್ಟಕ್ಕೆ ಮಾತ್ರವಲ್ಲದೆ ಜಾಗತೀಕ ಮಟ್ಟಕ್ಕೆ ಕೊಂಡೊಯ್ದವರು. ಅವರ ಕಾವ್ಯ, ಪ್ರತಿಪಾದಿಸುವ ಮೌಲ್ಯಗಳು ವಿಶ್ವ ಪ್ರಜ್ಞೆಯಿಂದ ಕೂಡಿದವು. ಅದನ್ನ ಜಗತ್ತು ಅರ್ಥ ಮಾಡಿಕೊಳಲು ಇನ್ನೂ ಕುಳಿತಿದೆ. ಪ್ರಸ್ತುತ ದೆಹಲಿಯಲ್ಲಿ ಮನೆಯಿಂದ ಹೊರಬರಲಾರದ ವಾತಾವರಣದ ಮಧ್ಯೆ ಕುವೆಂಪು ಅವರನ್ನು ನೆನಪಿಸಿಕೊಳ್ಳುವ ಈ ಕಾರ್ಯಕ್ರಮ ಮತ್ತೆ ಪೃಥ್ವಿಯೆಡೆಗೆ, ಮತ್ತೆ ಹಸಿರಿನೆಡೆಗೆ, ಮತ್ತೆ ಮಣ್ಣಿನೆಡೆಗೆ ಹೋಗುವ ಕ್ರಿಯೆಯಾಗಿದೆ ಎಂದೆರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಕ್ಕಳ ಸಾಹಿತ್ಯ ಪರಿಷತ್ತು ಕವಿಗಳ ಜನ್ಮ ದಿನಾಚರಣೆಯನ್ನು ಆಚರಿಸುವ ಮೂಲಕ ಮಕ್ಕಳಲ್ಲಿ ಕನ್ನಡ ನಾಡು–ನುಡಿಯ ಬಗ್ಗೆ ಅಭಿಮಾನದ ಜೊತೆಗೆ ಸಾಹಿತ್ಯದ ಒಲವನ್ನು ಮೂಡಿಸುತ್ತಿರುವುದು ಅನುಕರಣೀಯ. ಮುಂದಿನ ದಿನಗಳಲ್ಲಿ ಮಕ್ಕಳ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಿಗೆ ಸಂಘವು ಇನ್ನೂ ಹೆಚ್ಚು ಸಹಕಾರ ನೀಡಲಿದೆ ಎಂದು ಹೇಳಿದರು. ಪರಿಷತ್ತಿನ ದೆಹಲಿ ಘಟಕದ ಉಪಾಧ್ಯಕ್ಷರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಕಾರ್ಯಕ್ರಮದಲ್ಲಿ ಗೌರವ ಉಪಸ್ಥಿತಿ ವಹಿಸಿದ್ದರು.

ಅಂತರ್ಜಾಲ ಜೂಮ್ ಆಪ್ ಮೂಲಕ ದೆಹಲಿ, ಹರಿಯಾಣ ಹಾಗೂ ಭಿವಾಡಿಯಿಂದ ಭಾಗವಹಿಸಿದ ಮಕ್ಕಳಾದ ಆದ್ಯ ಹಿರೇಮಠ, ಅಭಿಷೇಕ್ ಉಭಾಳೆ, ಅಧೋಕ್ಷಜ, ಅವನಿ ನೆಲ್ಲಿ, ಹಾಸಿನಿ, ಜೈನಬ್, ಮೊಹಮ್ಮದ್ ಸಾಹಿಲ್, ಸಂಚಿತಾ ಆರ್ ನೀಲೂರ, ವರ್ಣಿಕಾ, ನಂದಿತಾ ಉಭಾಳೆ, ಹರ್ಷಿತಾ ಉಭಾಳೆ, ಧೈರ್ಯ ಜೇವೂರ್, ಪ್ರಥಮ್ ಜೆ.ಎನ್, ಸಾಯಿಶ್ರೀ, ವಿಕಾಸ್ ಗೌಡ, ಆನಂದಿ ಗೌಡ, ಧನ್ವಿನ್ ಯು ಎಸ್, ವಿಧಿ ಕೊಠಾರಿ, ವಿಧಾನ್ ಕೊಠಾರಿ, ಅಂಕಿತ ಲದ್ದೆ ಮತ್ತು ಕಾರ್ತಿಕ್ ಆಚಾರ್ಯ ಕುವೆಂಪು ಕುರಿತ ಕಾರ್ಯಕ್ರಮ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್, ಧಾರವಾಡದ ಹಿರಿಯ ಸಾಹಿತಿ ಕಾಖಂಡಿಕಿ, ವಿದ್ವಾನ್ ಕೋಲಾರ್ ರಮೇಶ್, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಕೆ.ಎಸ್. ಮೂರ್ತಿ ಹಾಗೂ ಪರಿಷತ್ತಿನ ಪದಾಧಿಕಾರಿಗಳಾದ ರಾಮಚಂದ್ರ ಉಭಾಳೆ, ಕೃಷ್ಣರಾಜ್, ರತ್ನ ಅವರು ಹಾಗೂ ಅಪಾರ ಸಂಖ್ಯೆಯಲ್ಲಿ ದೆಹಲಿ ಎನ್.ಸಿ.ಆರ್.ನ ಕನ್ನಡಿಗರು ಉಪಸ್ಥಿತರಿದ್ದರು.

ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಅರವಿಂದ ಬಿಜ್ಜೈ ಅವರು ಮಾತನಾಡಿ ಕುವೆಂಪು ಜನ್ಮದಿನಾಚರಣೆಯ ಮಹತ್ವ ಹಾಗೂ ಪರಿಷತ್ತಿನ ಕಾರ್ಯಗಳ ಬಗ್ಗೆ ತಿಳಿಸಿದರು. ಸಂಘಟನಾ ಕಾರ್ಯದರ್ಶಿ ಯಲ್ಲಾಲಿಂಗ ಕೊಪ್ಪದ ಮುಖ್ಯ ಅತಿಥಿಗಳಾದ ಡಾ. ವಿ.ಎಸ್. ಮಾಳಿಯವರ ಪರಿಚಯವನ್ನು ಮಾಡಿಕೊಟ್ಟರು. ಸಂಚಾಲಕರಾದ ಕೃಷ್ಣರಾಜ್ ಕೆ.ಎನ್. ಅವರು ಸ್ವಾಗತಿಸಿದರು. ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ತಿನ ಕೇಂದ್ರ ನಿರ್ದೇಶಕರಾದ ಸಿ.ಎಸ್. ಅರುಣ್ ವಂದಿಸಿದರು. ಕುಮಾರ್ ಕಾವ್ಯಾಂಶ್ ಹಾಗೂ ಕುಮಾರಿ ಶ್ರೇಷ್ಠ ಎಚ್. ತೇಲಿ ಸುಂದರವಾಗಿ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. □

***ಮಕ್ಕಳ ಸಾಹಿತ್ಯ ಪರಿಷತು***
ನವದೆಹಲಿ

# "ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನಿಂದ 5ನೇಯ ರಾಷ್ಟ್ರೀಯ ಉತ್ಸವ ಮತ್ತು ಪದ್ಮಶ್ರೀ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ"




ದೆಹಲಿ ಸಾವಿರಾರು ವರ್ಷಗಳಿಂದ ರಾಜಕೀಯ ಚಟುವಟಿಕೆಗಳ ತಾಣವಾದ ದೇಶದ ರಾಜಧಾನಿ. ಇಲ್ಲಿ ದೇಶದ ಪ್ರತಿ ರಾಜ್ಯದ ಇತಿಹಾಸ, ರಾಜಕೀಯ, ಸಂಸ್ಕೃತಿ, ಪರಂಪರೆ, ಜನರ ಮನಸ್ಸುಗಳೊಂದಿಗೆ ತಳುಕು ಹಾಕಿಕೊಂಡಿದೆ. ಕನ್ನಡ ಸೇರಿದಂತ ಕರ್ನಾಟಕದ ಎಲ್ಲ ರಂಗಗಳು ರಾಷ್ಟ್ರ ರಾಜಧಾನಿಯಲ್ಲಿ ವಿಜೃಂಭಿತವಾಗಿ ಮೆರೆಯುತ್ತಿವೆ. ಈ ಸಂದರ್ಭದಲ್ಲಿ ನಾಡುಕಟ್ಟಲು ಬುನಾದಿ ಹಾಕಿದ ನೂರಾರು ಕನ್ನಡ ಕಣ್ಮಣಿಗಳ ಜೊತೆಗೆ ಸ್ವಚ್ಛಂದ ಕಣ್ಮಣಿಯಾಗಿ ನಿಲ್ಲುವವರು, ಮಹಾನ್ ವೀರನಾದ ನಾಡಪ್ರಭು ಕೆಂಪೇಗೌಡರು. ಅವರ ಜನ್ಮಾಚರಣೆಯ ಉತ್ಸವ, ನಾಡು-ನುಡಿ, ಸಮಾಜಕ್ಕೆ ಒಂದು ಸಂದೇಶವನ್ನು ನೀಡುತ್ತದೆ. ಇಂತಹ ಭವ್ಯ ಸಂದೇಶಗಳನ್ನು ನೀಡಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಸೇವೆಗೈದ ಮಹಾನ್ ವ್ಯಕ್ತಿಗಳ ಜೀವನವನ್ನು ಮುಂದಿನ ಪೀಳಿಗೆಗೆ ಎರಕ ಹೊಯ್ಯಲು ದಿನಾಂಕ 19.12.2021 ರಂದು ಆಚರಿಸಿದ ನಾಡಪ್ರಭು ಕೆಂಪೇಗೌಡರ 5ನೇ ರಾಷ್ಟ್ರೀಯ ಉತ್ಸವ ಮತ್ತು ಅಭಿನಂದನಾ ಕಾರ್ಯಕ್ರಮ ಸಾಕ್ಷಿಯಾಯಿತು.

2020-2021 ನೇ ಸಾಲಿನ ಪದ್ಮಶ್ರೀ ಪುರಸ್ಕೃತರಾದ ಡಾ. ಬಿ.ಎನ್. ಗಂಗಾಧರ್, ಎಂ.ಪಿ. ಗಣೇಶ್, ವೆಂಕಟೇಶ್ ಕೆ.ವೈ. ಮತ್ತು ವಿದುಷಿ ಕೆ.ಎಸ್. ಜಯಲಕ್ಷ್ಮಿ ಅವರುಗಳಿಗೆ ನೀಡಿದ ಅಭಿನಂದನಾ ಕಾರ್ಯಕ್ರಮ ದೆಹಲಿ ಕನ್ನಡಿಗರ ಸಮ್ಮುಖದಲ್ಲಿ ಕೆಂಪೇಗೌಡ ಫೌಂಡೇಶನ್ನಿನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜ ಅವರ ಸಂಘಟನಾತ್ಮಕ ಪ್ರಯತ್ನದಿಂದ ಅತ್ಯಂತ ಯಶಸ್ವಿಯಾಯಿತು.

ವೇದಘೋಷ ಪ್ರಾರ್ಥನೆಯೊಂದಿಗೆ ಹಾಗು ದೀಪ ಬೆಳಗಿಸುವ ಮೂಲಕ ವಿದ್ಯುಕ್ತ ಚಾಲನೆಗೊಂಡ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದ ಆದಿಚುಂಚನಗಿರಿಯ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು ಮಾತನಾಡಿ, ಕಾರ್ಯಕ್ರಮದ ಮುಖ್ಯ ಅತಿಥಿಯಾದ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿ.ಎಲ್. ಸಂತೋಷ್ ಅವರು ನಾಡು ನುಡಿಯ ಅಸ್ಮಿತೆಯಾಗಿ ದೇಶದ ಉನ್ನತ ಸ್ಥಾನದಲ್ಲಿದ್ದಾರೆ. ಅದು ನಮಗೊಂದು ಹೆಮ್ಮೆ. ಅವರ ಸರಳತೆಯೇ ಅವರ ಯಶಸ್ಸಿನ ಕೀಲಿ ಕೈಯಾಗಿದೆ. ನಾಡಪ್ರಭು ಕೆಂಪೇಗೌಡರು, ಬೆಂಗಳೂರನ್ನು ಕಟ್ಟಿದ ಮಹಾನ್ ವೀರರು. ಅವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಏರ್‌ಪೋರ್ಟ್ ಕೂಡ ಇದೆ. ಇವರ ಹೆಸರಿನ ಫೌಂಡೇಶನ್ನಿನಲ್ಲಿ, ಅಧ್ಯಕ್ಷರಾದ ಬಿ.ಎಲ್. ಸುರೇಶ್, ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಂ. ನಾಗರಾಜ ಹಾಗೂ ಸಂಘಟಕರಿಂದ ದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗುತ್ತಿರುವುದು ಸಂತೋಷದ ವಿಷಯ ಎಂದರು. ತಮ್ಮ ಭಾಷಣದಲ್ಲಿ ಸ್ವಾಮಿ ವಿವೇಕಾನಂದರ ಚಿಕ್ಯಾಗೊ ಸನ್ನಿವೇಶವನ್ನು ಉಲ್ಲೇಖಿಸಿದ ಸ್ವಾಮೀಜಿಗಳು, ಮೈಸೂರು ಮಹಾರಾಜರ ಸಹಕಾರದಿಂದ ಅಮೇರಿಕಾದ ಸಮ್ಮೇಳನಕ್ಕೆ ಹೋಗಿದ್ದ ಸ್ವಾಮಿ ವಿವೇಕಾನಂದರು, ಮೈಸೂರು ಮಹಾರಾಜರಿಗೆ ಬರೆದಿದ್ದ ಪತ್ರದಲ್ಲಿ ಮನುಷ್ಯನ ಜೀವನ ಬಹಳ ಚಿಕ್ಕದಾಗಿದ್ದು, ಇಲ್ಲಿ ಮನುಷ್ಯ ಬದುಕಿದ್ದಾಗ ತನ್ನೊಳಗೆ ಮಾತ್ರ ತಾನು ಬದುಕಿದರೆ, ತನ್ನ ಸೇವೆಯಿಂದ ಮಾತ್ರ, ತಾನು ಸತ್ತ ಮೇಲೂ ಕೂಡ ಇತರ ಮನಸ್ಸಿನಲ್ಲಿ ಬದುಕುತ್ತಾನೆ ಎಂಬುದು ಉಲ್ಲೇಖವಾಗಿತ್ತು ಎಂದು ತಿಳಿಸಿದರು. ಇಲ್ಲಿ ಸೇರಿರುವ ಪದ್ಮಶ್ರೀ ಪುರಸ್ಕೃತ ಸಮಾಜ ಸೇವಕರಾದ ಮಹಾನ್ ವ್ಯಕ್ತಿಗಳು ಕೂಡ ತಮ್ಮ ಆದರ್ಶವನ್ನು ಈ ಸಮಾಜಕ್ಕಾಗಿ ಮುಡುಪಾಗಿಟ್ಟವರು. ಹೀಗಾಗಿಯೇ ಅವರ ಈ ಜೀವನ ಇಂದು ದೇಶಕ್ಕೆ ಆದರ್ಶಮಯವಾಗಿದೆ ಎಂದರು.

ಕಾರ್ಯಕ್ರಮದ ವಿಶೇಷ ಉಪಸ್ಥಿತಿಯನ್ನು ವಹಿಸಿದ್ದ ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳು ಮಾತನಾಡಿ ಪದ್ಮಶ್ರೀ ಪುರಸ್ಕೃತರಿಗೆ ಸನ್ಮಾನ ಮಾಡಿರುವುದು ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದ್ದು ಇಡೀ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರಿಗೆ ಸಂತಸದ ವಿಷಯ, ನಿಮ್ಮ ಕಾರ್ಯಕ್ರಮ ಇನ್ನೊಬ್ಬರಿಗೆ ಮಾದರಿಯಾಗುತ್ತದೆ ಎಂದು ಕೆಂಪೇಗೌಡ ಫೌಂಡೇಶನ್ನಿನ ಕಾರ್ಯವೈಖರಿಯ ಬಗೆಗೆ ಶ್ಲಾಘನೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀ ಬಿ.ಎಲ್. ಸಂತೋಷ್ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸೃಜನಶೀಲ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುವ ಶ್ರೀ ಸಿ.ಎಂ. ನಾಗರಾಜ ಹಾಗು ಅವರೊಂದಿಗೆ ಕೆಂಪೇಗೌಡ ಫೌಂಡೇಶನ್ನಿನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಅವರ ಕೆಲಸಗಳನ್ನು ನೆನೆಯುತ್ತ ಶ್ಲಾಘನೆ ಮಾಡಿದರು. ಸಮಾಜಸೇವೆ, ಶಿಕ್ಷಣ ಮತ್ತು ಧಾರ್ಮಿಕ ಪರಂಪರೆಯ ಬಗ್ಗೆ ಸ್ಫುಟವಾಗಿ ಮಾತನಾಡಿದರು. ಹಿಂದೂ ಧರ್ಮ ಸದಾ ತನ್ನ ಮೂಲ ಕಟ್ಟುಪಾಡು ಮತ್ತು ಪರಂಪರೆಯೊಂದಿಗೆ ಮತ್ತು ಜ್ಞಾನದ ನಡುವೆ ಬದಲಾವಣೆಯೊಂದಿಗೆ ಹೊಸತನವನ್ನೆಲ್ಲವನ್ನು ತನ್ನಲ್ಲಿ ಅಳವಡಿಸಿಕೊಂಡು ಹೋಗುತ್ತಿದೆ. ಅಂತಹ ಕಾರ್ಯಗಳಲ್ಲಿ ಆದಿಚುಂಚನಗಿರಿ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು ಪ್ರಮುಖರಾಗಿದ್ದಾರೆ. ಗೋ ಸೇವೆ ಮತ್ತು ಶಿಕ್ಷಣಗಳ ವಿಷಯದಲ್ಲಿ ಉಡುಪಿಯ ಹಿರಿಯ ಗುರುಗಳು ಹಾಕಿಕೊಟ್ಟ ಆದರ್ಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಸಾಗಿಹೋಗುತ್ತಿರುವ ಪೇಜಾವರ ಮಠದ ಪ್ರಸ್ತುತ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಗಳು ಕೂಡ ನಮಗೆ ಆದರ್ಶಮಯ. ಇಲ್ಲಿ ಸೇರಿರುವ ಪದ್ಮ ಪುರಸ್ಕೃತರೆಲ್ಲರೂ ತಮ್ಮ ನಿಸ್ವಾರ್ಥ ಸೇವೆಯಿಂದ ಪ್ರಶಸ್ತಿ ಪಡೆದುಕೊಂಡವರು. ಸಮಾಜದಲ್ಲಿ ನಾವು ಹುಡುಕಿಕೊಂಡು ಹೋದಾಗ ಸಿಕ್ಕ ಪ್ರತಿಫಲಕ್ಕೆ ಬೆಲೆ ಕಡಿಮೆ, ತಾನಾಗಿ ಸ್ವತಃ ಬಂದ ಪ್ರತಿಫಲಕ್ಕೆ ಬೆಲೆ ಜಾಸ್ತಿ ಇರುತ್ತದೆ. ಅದಕ್ಕೆ ಸಾಕ್ಷಿಯಾದವರು ಪದ್ಮಶ್ರೀ ಪುರಸ್ಕೃತರು. ದೇಶದ ಜನ ಸಾಮಾನ್ಯ ವ್ಯಕ್ತಿಗಳಿಗೆ ಪದ್ಮಶ್ರೀಯಂತಹ ಪ್ರಶಸ್ತಿಗಳು ಸಿಗುವಂತಾಗಿದ್ದು ಪ್ರಧಾನಿ ಮೋದಿಯವರ ಕಾಲದಲ್ಲಿ ಎಂದರು. ಹಲವಾರು ಸಂಘ-ಸಂಸ್ಥೆಗಳು, ಫೌಂಡೇಶನ್‌ಗಳು ಕೇವಲ ಹೆಸರು ಮತ್ತು ವರ್ಚಸ್ಸಿಗಾಗಿ ತಮ್ಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಈ ದಿನಗಳಲ್ಲಿ, ಮಕ್ಕಳ ಭವಿಷ್ಯತ್ತಿಗಾಗಿ ಮತ್ತು ಸಮಾಜ ಸೇವಕರನ್ನು ಗುರುತಿಸಿ ಅಭಿನಂದಿಸುತ್ತಿರುವುದರ ಮೂಲಕ ಸಮಾಜಕ್ಕೆ ಮಾದರಿಯಾಗಿ ತೋರಿಸುವ ಮಹಾನ್ ಕೆಲಸವನ್ನು ಕೆಂಪೇಗೌಡ ಫೌಂಡೇಶನ್ ಮಾಡುತ್ತಿದೆಯೆಂದು ಬಿ.ಎಲ್. ಸಂತೋಷ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. 2020-21ರ ಸಾಲಿನಲ್ಲಿ ಪದ್ಮ ಪ್ರಶಸ್ತಿ ಪಡೆದ ಎಲ್ಲಾ ಕನ್ನಡಿಗರ ಒಂದು ಸಂಕ್ಷಿಪ್ತ ಪಕ್ಷಿನೋಟವನ್ನು ಅವರು ನೀಡಿದರು.

ಕೇಂದ್ರ ಮಂತ್ರಿಗಳಾದ ಶ್ರೀ ರಾಜೀವ್ ಚಂದ್ರಶೇಖರ್ ಅವರು ಮಾತನಾಡಿ ಮೋದಿ ಸರ್ಕಾರದಿಂದಾಗಿ ದೇಶದಲ್ಲಿರುವ ಹಾಗೂ ರಾಜ್ಯದಲ್ಲಿರುವ ವ್ಯಕ್ತಿಗಳು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ. ಅವರ ಕೆಲಸಗಳಿಂದಾಗಿ ಈ ಸಮಾಜಕ್ಕೆ ಸ್ಫೂರ್ತಿ ಸಿಗುತ್ತಿದೆ. ಅದಕ್ಕೆ ಇಲ್ಲಿ ಸೇರಿರುವ ನಾಲ್ಕು ಜನ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರೇ ಉದಾಹರಣೆ. ನೀವು ಎಲ್ಲೇ ಸೇವೆ ಸಲ್ಲಿಸಿ, ಎಲ್ಲಿಯೇ ಕೆಲಸ ಮಾಡಿ, ಎಲ್ಲಿಯೇ ಉದ್ಯಮ ಮಾಡಿ ಆದರೆ ದಿನದ ಕೊನೆಗೆ

ನಾವು ಭಾರತೀಯರು ಎಂಬುದನ್ನು ಮಾತ್ರ ಮರೆಯಬಾರದು ಎಂದು ಹೇಳಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಎಲ್ಲ ಕನ್ನಡಿಗರಿಗೆ ಮತ್ತು ಪ್ರತಿಭಾ ಪುರಸ್ಕೃತ ಹಾಗು ವಿದ್ಯಾರ್ಥಿ ವೇತನ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ತಮ್ಮ ಅಭಿನಂದನೆಗಳನ್ನು ತಿಳಿಸಿದರು.

ಉಪಸ್ಥಿತರಿದ್ದ ಮತ್ತೋರ್ವ ಕೇಂದ್ರ ಮಂತ್ರಿಗಳಾದ ಸನ್ಮಾನ್ಯ ಶೋಭಾ ಕರಂದ್ಲಾಜೆಯವರು ಮಾತನಾಡಿ ಮೋದಿಯವರು ಪ್ರಧಾನಿಯಾದ ಮೇಲೆ ಶ್ರೀಸಾಮಾನ್ಯರಿಗೂ ಪದ್ಮಶ್ರೀ, ಪದ್ಮವಿಭೂಷಣ ಅಂತಹ ಪ್ರಶಸ್ತಿಗಳು ಸಿಗುವ ಹಾಗೆ ಆಗಿದೆ. ಈಗಿನ ಸರ್ಕಾರದಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರುಗಳು ಪ್ರಕಟಗೊಳ್ಳುವವರೆಗೂ ತಿಳಿದಿರುವುದಿಲ್ಲ, ಇನ್ನು ರಾಜಕೀಯದಲ್ಲೂ ಕೂಡ ಪಕ್ಷದ ನಾಯಕರುಗಳ ಹೆಸರನ್ನು ಪ್ರಕಟಿಸುವವರೆಗೂ ಯಾರು ಮಂತ್ರಿ ಎಂಬ ಹೆಸರುಗಳು ಕೂಡ ಇಲ್ಲಿ ತಿಳಿಯುವುದಿಲ್ಲ. ಕೆಲವು ವರ್ಷಗಳ ಹಿಂದೆ ಇದೇ ಪ್ರಶಸ್ತಿಗಳಿಗಾಗಿ ಸಮಾಜದ ನಾಯಕರುಗಳ ಪ್ರಭಾವವನ್ನು ಬಳಸಿ ಎಷ್ಟೋ ಅರ್ಹರಲ್ಲದ ವ್ಯಕ್ತಿಗಳು ಪ್ರಶಸ್ತಿಯ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಿಕೊಂಡಿರುವ ಉದಾಹರಣೆಗಳು ಇದೆ ಎಂದರು. ಈ ಶ್ರೀಸಾಮಾನ್ಯರು ತಮ್ಮ ಸೇವೆ ಮತ್ತು ಸಾಧನೆಯಿಂದ ಪಡೆದುದಕ್ಕಾಗಿ, ಆ ಪ್ರಶಸ್ತಿಗಳಿಗೆ ದೊಡ್ಡ ಮೌಲ್ಯ ಬಂದಿದೆ. ರಾಷ್ಟ್ರಪತಿಗಳು ನೀಡುವ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸಿಗುವ ಖುಷಿಯಷ್ಟೇ, ಇವತ್ತು ನಮ್ಮ ಈ ಕೆಂಪೇಗೌಡ ಉತ್ಸವದಲ್ಲಿ ಸಿಗುತ್ತಿದೆ ಎಂದು ಹೇಳುತ್ತಾ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಪದ್ಮಶ್ರೀ ಪುರಸ್ಕೃತರಾದ ಕೆ.ವೈ. ವೆಂಕಟೇಶ್ ಅವರು ಮಾತನಾಡಿ ದೈಹಿಕವಾಗಿ ಅಂಗವಿಕಲರಾಗಿರುವ ಸಾಧಕರಿಗೆ ಸಾಧನೆ ಮಾಡಲು ಸರ್ಕಾರಗಳಿಂದ ಅನುಕಂಪದ ಹೊರತಾಗಿ ಅವಕಾಶ ಸಹಕಾರ ಮತ್ತು ಬೆಂಬಲ ನೀಡಬೇಕಾಗಿದೆ. ಇವತ್ತು ಕೆಂಪೇಗೌಡ ಫೌಂಡೇಶನ್ ವತಿಯಿಂದ ಸಾಧಕರಿಗೆ ಸನ್ಮಾನ ನೀಡಿದ್ದು ಎಲ್ಲರಿಗೂ ಹೆಮ್ಮೆ ತರುವ ವಿಷಯವೆಂದು ಕಾರ್ಯಕ್ರಮವನ್ನು ಶ್ಲಾಘಿಸಿದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಶ್ರೀ ಎಂ.ಪಿ. ಗಣೇಶ್, ಡಾ. ಬಿ.ಎನ್. ಗಂಗಾಧರ ಮತ್ತು ವಿದುಷಿ ಕೆ.ಎಸ್. ಜಯಲಕ್ಷ್ಮಿ ಅವರುಗಳು ಕಾರ್ಯಕ್ರಮದಲ್ಲಿ ಮಾತನಾಡಿ ತಮನ್ನು ಅಭಿನಂದಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ಅರ್ಪಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ನಿನ ಅಧ್ಯಕ್ಷರಾದ ಶ್ರೀ ಬಿ.ಎಲ್. ಸುರೇಶ್ ಅವರು ಮಾತನಾಡಿ ಫೌಂಡೇಶನ್ನಿನ ಮೂಲ ಉದ್ದೇಶ, ಕರ್ನಾಟಕದ ಹಳ್ಳಿಗಳಿಂದ ದೆಹಲಿಗೆ ಬರುವ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಉನ್ನತ ಮಟ್ಟದಲ್ಲಿ ಉತ್ತೀರ್ಣರಾದ ಮಕ್ಕಳಿಗೆ, ಯುಪಿಎಸ್ಸಿ ತರಬೇತಿಗಾಗಿ ಹಣಕಾಸಿನ ನೆರವು ಸೇರಿದಂತೆ, ಊಟ, ವಸತಿ ನೆರವು ಮಾಡಿಕೊಡುವುದು. ಇದಕ್ಕಾಗಿ ಫೌಂಡೇಶನ್ ಕಳೆದ ಏಳು ವರ್ಷಗಳಿಂದ ಶ್ರಮಿಸುತ್ತಿದೆ. ಯುಪಿಎಸ್ಸಿ ಆಕಾಂಕ್ಷಿಗಳಿಗೆ ನೆರವಾಗಲು ಆನ್‌ಲೈನ್ ತರಬೇತಿಯನ್ನು ಫೌಂಡೇಶನ್ ವತಿಯಿಂದ ಕೊಡಿಸಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೂಡ ನೀಡಲಾಗುತ್ತಿದೆ. ಈ ಒಳ್ಳೆಯ ಸಮಾಜಮುಖಿ ಕೆಲಸಕ್ಕೆ ಈ ವೇದಿಕೆ ಮೇಲಿರುವ ಎಲ್ಲ ಶ್ರೀಗಳ ಆಶೀರ್ವಾದ ಬೇಕಿದೆ ಎಂದರು.

ಕೆಂಪೇಗೌಡ ಫೌಂಡೇಶನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿ.ಎಂ. ನಾಗರಾಜ










ಅವರು ತಮ್ಮ ಸ್ವಾಗತ ಭಾಷಣವನ್ನು ಮಾಡುವುದರ ಜೊತೆಗೆ, ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವ ನಡೆಯುತ್ತಿರುವ ಈ ದೆಹಲಿ ಕರ್ನಾಟಕ ಸಂಘದ ತಾನು ಅಧ್ಯಕ್ಷನಾದ ಮೇಲೆ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಲೋಧಿ ರಸ್ತೆಯಲ್ಲಿರುವ ದೆಹಲಿ ಕನ್ನಡ ಶಾಲೆ, ಕನ್ನಡೇತರರಿಗೂ ಕೂಡ ಕನ್ನಡವನ್ನು ಕಲಿಸುವ ಕೆಲಸವನ್ನು ಮಾಡುತ್ತಿದೆ. ದೆಹಲಿ ಕರ್ನಾಟಕ ಸಂಘ, ದೆಹಲಿಯಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಕಳೆದ 75 ವರ್ಷಗಳಿಂದ ಕನ್ನಡಪರ ಕೆಲಸ ಮತ್ತು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ. ಹೀಗಾಗಿ ಬರುವ ವರ್ಷ ಕರ್ನಾಟಕ ಸಂಘ ಸ್ಥಾಪನೆಯಾಗಿ ಎಪ್ಪತ್ತೈದು ವರ್ಷದ ಅಮೃತ ಮಹೋತ್ಸವದ ಕಾರ್ಯಕ್ರಮದಲ್ಲಿ, ಕರ್ನಾಟಕದ ಪ್ರತಿ ಜಿಲ್ಲೆಯಿಂದ ಕಲಾ ತಂಡಗಳನ್ನು ಆಮಂತ್ರಿಸಿ, ಕಾರ್ಯಕ್ರಮವನ್ನು ಕೊಡಿಸುವ ಯೋಜನೆಯನ್ನು ಸಂಘ ಮತ್ತು ಸಂಘದ ಸದಸ್ಯರು ಹಾಕಿಕೊಂಡಿದ್ದು, ಈ ಕಾರ್ಯಕ್ರಮಗಳ ಸಮಾರೋಪ ಸಮಾರಂಭ ಕಾರ್ಯಕ್ರಮಕ್ಕೆ ದೆಹಲಿಯ ತಾಲ್ಕತೋರಾ ಸ್ಟೇಡಿಯಂನಲ್ಲಿ, ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಜನ ಕನ್ನಡಿಗರನ್ನು ಸೇರಿಸುವ ಯೋಜನೆ ಹಾಕಿಕೊಂಡಿದ್ದು, ಕಾರ್ಯಕ್ರಮಕ್ಕೆ ಭಾರತದ ಹೆಮ್ಮೆಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರನ್ನು ಮುಖ್ಯ ಅತಿಥಿಗಳಾಗಿ ಕರೆತರುವ ಕೆಲಸವನ್ನು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್ ಅವರು ಮಾಡಿಕೊಡಬೇಕೆಂದು ವಿನಂತಿ ಪತ್ರವನ್ನು ಸಲ್ಲಿಸಿದರು.

ದೆಹಲಿಯ ಕೊರೆಯುವ ಚಳಿಯಲ್ಲಿ, ಸುಮಾರು ಮೂರು ಗಂಟೆಗಳ ಕಾಲ ನಡೆದ ಕಾರ್ಯಕ್ರಮದಲ್ಲಿ, ದೆಹಲಿ ಕನ್ನಡಿಗರು ಆಸಕ್ತಿಯಿಂದ ಭಾಗವಹಿಸಿ, ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೆ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ತಮ್ಮ ಹಾರೈಕೆ ವ್ಯಕ್ತಪಡಿಸಿದರು. ಕೆಂಪೇಗೌಡ ಫೌಂಡೇಶನ್ನಿನ ವತಿಯಿಂದ ಐವತ್ತು ಜನ ವಿದ್ಯಾರ್ಥಿಗಳಿಗೆ, ತಲಾ ಹತ್ತು ಸಾವಿರ ರೂಪಾಯಿ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳು ಮತ್ತು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳ ಅಮೃತ ಹಸ್ತದಿಂದ ಪದ್ಮಶ್ರೀ ಪುರಸ್ಕೃತರಿಗೆ ಕೆಂಪೇಗೌಡ ಫೌಂಡೇಶನ್ನಿನ ವತಿಯಿಂದ ಗೌರವ ಪೂರ್ವಕವಾಗಿ ಸನ್ಮಾನ ಮಾಡಲಾಯಿತು.

ಕರ್ನಾಟಕದ ವಿವಿಧ ಭಾಗದಿಂದ ಬಂದ ಕಲಾ ತಂಡಗಳಾದ ನಾರಾಯಣಸ್ವಾಮಿ ಮತ್ತು ತಂಡ ನಾದಸ್ವರ, ಮೋಹನ್ ಮತ್ತು ತಂಡ ಸ್ಯಾಕ್ಸೋಫೋನ್, ಶಿವಾಂಗಿನಿ ಮತ್ತು ತಂಡ ಸಮೂಹ ನೃತ್ಯ, ರೂಪಾ ಮತ್ತು ತಂಡ ಜಾನಪದ ನೃತ್ಯ, ಸ್ಮಿತಾ ಮತ್ತು ತಂಡ ಶಾಸ್ತ್ರೀಯ ನೃತ್ಯ ಕಾರ್ಯಕ್ರಮಗಳ ಮನರಂಜನೆಯನ್ನು ದೆಹಲಿ ಕನ್ನಡಿಗರಿಗೆ ಉಣಬಡಿಸಿದರು.

ಎನ್.ಪಿ. ಚಂದ್ರಶೇಖರ ಹಾಗೂ ಪೂಜಾ ರಾವ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು, ಶಿವಪ್ಪ ಎಂ. ಮಾಲಿನಿ ಪ್ರಹ್ಲಾದ್, ಕೆ.ಎಸ್. ಮೂರ್ತಿ ಮತ್ತು ಪ್ರಭಾಕರ್ ಮಡ್ಡಿತೋಟ ಅವರು ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರ ಪರಿಚಯವನ್ನು ಮಾಡಿಕೊಟ್ಟರು, ದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್ನಿನ ಖಜಾಂಚಿಗಳಾದ ಡಾ. ಬಿ.ಟಿ. ಚಿದಾನಂದ ಮೂರ್ತಿಯವರು ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ವಂದನಾರ್ಪಣೆ ಅರ್ಪಿಸಿದರು. □

**ಯಲ್ಲಾಲಿಂಗ ಕೊಪ್ಪದ**

# “ಜಗತ್ತಿನಲ್ಲಿ ಸಂಸ್ಕೃತ, ಪ್ರಾಕೃತ ಭಾಷೆಗಳು ಸಾಹಿತ್ಯಾತ್ಮಕವಾಗಿ, ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ್ದ ಸಮಯದಲ್ಲಿ ಸಾಮಾನ್ಯ ಜನರ ಆಡುಭಾಷೆ ಕನ್ನಡದಲ್ಲಿ ಸಾಹಿತ್ಯವನ್ನು ರೂಪಿಸಿ ಕೊಟ್ಟಂಥವರು ವಚನಕಾರರು”-ಚಿಂತಕಿ-ಡಾ. ಪ್ರೇಮಾ ಸಿದ್ಧರಾಜು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಪ್ರದೇಶ ಘಟಕವು, ತನ್ನ ಸ್ಥಾಪಿತ ಒಂದು ವರ್ಷದ ಸಂಭ್ರಮಾಚರಣೆಯೊಂದಿಗೆ, ರಾಷ್ಟ್ರಕವಿ ಕುವೆಂಪು ಜನ್ಮ ದಿನದ ಅಂಗವಾಗಿ ದಿನಾಂಕ 29.12.2021 ರಂದು ‘ಕುವೆಂಪು ಮತ್ತು ವಚನಕಾರರ ಕನ್ನಡ ಚಿಂತನೆ’ ಎಂಬ ವಿಷಯದ ಮೇಲೆ ಹಮ್ಮಿಕೊಂಡಿದ್ದ 13 ನೇಯ ವಿಶೇಷ ಆನ್‌ಲೈನ್ ಉಪನ್ಯಾಸ ಮಾಲಿಕೆಯ ಕಾರ್ಯಕ್ರಮವನ್ನು ಉದ್ದೇಶಿಸಿ ವಿಚಾರ ಮಂಡಕಿಯಾಗಿ ಭಾಗವಹಿಸಿದ್ದ ಬೆಂಗಳೂರಿನ ಎಸ್.ಜೆ.ಆರ್. ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರೇಮಾ ಸಿದ್ಧರಾಜು ಅವರು ಹೀಗೆ ಶರಣರ ಹಾಗು ಕುವೆಂಪು ಅವರ ಬಗೆಗಿನ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಹನ್ನೆರಡನೆಯ ಶತಮಾನದ ಶರಣರ ಚಿಂತನೆ ಎಲ್ಲರಿಗೂ ಸಮಾನತೆ, ಸಹಬಾಳ್ವೆ, ಆಹಾರ, ಊಟ, ಬಟ್ಟೆ, ವಸತಿ ಎಂಬ ಮೂಲಭೂತ ಕಲ್ಪನೆಗಳ ಬಗೆಗೆ ವಿಚಾರಗಳನ್ನು ಮೂಡಿಸಿಕೊಟ್ಟು, ಮೂಢನಂಬಿಕೆಯನ್ನು ಹೋಗಲಾಡಿಸುವ ಮೂಲ ಉದ್ದೇಶವಾಗಿತ್ತು. ಸತ್ಯ ಹೇಳುವುದೇ ಸ್ವರ್ಗ, ಸುಳ್ಳು ಹೇಳುವುದೇ ನರಕ ಎಂಬುದನ್ನ ವಚನಕಾರರು ನಮಗೆ ತಿಳಿಸಿಕೊಟ್ಟಿದ್ದಾರೆ. ನಾವು ಮಾಡುವ ಕೆಲಸದಿಂದ ದೈವತ್ವವನ್ನು ಕಂಡುಕೊಳ್ಳುತ್ತೇವೆ ಎಂದು ಶರಣರು ತಿಳಿಸಿದ್ದಾರೆ. ಅನುಭವ ಮಂಟಪದ ಪರಿಕಲ್ಪನೆ ತಂದು, ಬೆಳಗ್ಗೆಯಿಂದ ಸಂಜೆವರೆಗೂ, ಎಲ್ಲಾ ಅವರವರ ಉದ್ಯೋಗವನ್ನು ಗೌರವಿಸಿ, ದುಡಿಮೆಗೆ ಒಂದು ಆಧಾರ ಮಾಡಿಕೊಂಡು, ಸ್ತ್ರೀಯರು ಹೊರಗೆ ಬರಲು ಆಗದಂತಹ ಪರಿಸ್ಥಿತಿ ಇದ್ದಾಗ, ನಾನ್ನೂರಕ್ಕೂ ಹೆಚ್ಚು ವಚನಕಾರರು, ಅದರಲ್ಲಿ ಮೂವತ್ತೆರಡಕ್ಕೂ ಹೆಚ್ಚು ಮಹಿಳೆಯರು ವಚನಕಾರ್ತಿಯವರಾಗಿ ಹೊರಹೊಮ್ಮಿದ್ದು, ಅಲ್ಲಿ ಮಹಿಳಾ ಸಮಾನತೆಗಾಗಿ ಕೊಟ್ಟಂತಹ ಪ್ರಾಮುಖ್ಯತೆ. ಈ ಕೆಲಸದಿಂದಾಗಿಯೇ ನಾವು ಇವತ್ತು 24,000 ವಚನಗಳನ್ನು ಪಡೆದುಕೊಂಡಿದ್ದೇವೆ ಎಂದು ತಿಳಿಸಿದರು.

ರಾಷ್ಟ್ರಕವಿ, ರಸಋಷಿ ಕುವೆಂಪುರವರ ಕೆಲವು ಪದ್ಯ–ಗದ್ಯ, ಕವನ–ಕಾದಂಬರಿಗಳ ನಿದರ್ಶನದ ಮೂಲಕ ಅವರ ಕುರಿತಾದ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಾ ಕುವೆಂಪುರವರು, ಕನ್ನಡ ಮೇಲಿನ ಪ್ರೇಮದಿಂದಾಗಿ ತಮ್ಮ ಪ್ರಾರಂಭಿಕ ಹೆಸರನ್ನು ಕೆ.ವಿ.ಪಿ. ಎಂದು ಹೆಸರಿಸದೆ “ಕುವೆಂಪು” ಎಂದಿಟ್ಟುಕೊಂಡು ಅದನ್ನು ಕೊನೆಯವರೆಗೂ ಉಳಿಸಿಕೊಂಡರು ಎಂದರು. ಪ್ರಾರಂಭದಲ್ಲಿ ಅವರು ಇಂಗ್ಲಿಷ್ ಭಾಷೆಯಲ್ಲಿ ಕಾದಂಬರಿ ಬರೆದಿದ್ದರೂ ಆನಂತರ ಕನ್ನಡದ ಕಂಪನ್ನು ಹರಡಲು ಪ್ರಾರಂಭಿಸಿದರು. ಕನ್ನಡಕ್ಕೆ ಕುವೆಂಪು ಎಂಬ ಮಾಣಿಕ್ಯರನ್ನು ಕೊಟ್ಟ ಶ್ರೇಯಸ್ಸು ಜೇಮ್ಸ್ ಕಸಿನ್ಸ್ ಅವರಿಗೆ ಸಲ್ಲುತ್ತದೆ. ಕುವೆಂಪುರವರು ಇಂಗ್ಲಿಷಿನಲ್ಲಿಯೇ ತಮ್ಮ ಸಾಹಿತ್ಯವನ್ನೇನಾದರೂ ಮುಂದುವರಿಸಿದ್ದರೆ ಅವರಿಗೆ ನಮ್ಮ ಭಾರತ ದೇಶಕ್ಕೆ, ರವೀಂದ್ರನಾಥ ಟ್ಯಾಗೂರ್ ಅವರ ನಂತರ ಸಾಹಿತ್ಯ ಕ್ಷೇತ್ರಕ್ಕೆ ಮತ್ತೊಂದು ನೊಬೆಲ್ ಪ್ರಶಸ್ತಿ ಸಿಗುತ್ತಿತ್ತೇನೊ ಎಂದೆನಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರಪ್ರೇಮದ ಜೊತೆಗೆ, ಉಪರಾಷ್ಟ್ರೀಯತೆಯನ್ನು ಸಹ ನಾವು ಇಟ್ಟುಕೊಳ್ಳಬೇಕು ಎಂದು ಕುವೆಂಪುರವರು ತಮ್ಮ ಸಾಹಿತ್ಯದ ಮೂಲಕ ತೋರಿಸಿಕೊಟ್ಟರು. ಕರ್ನಾಟಕ



ಏಕೀಕರಣ ಸಂದರ್ಭದಲ್ಲಿ ವಿವಿಧ ಭಾಗಗಳಲ್ಲಿ ಹಂಚಿ ಹೋಗಿದ್ದ ಕರ್ನಾಟಕದ ಭಾಗಗಳನ್ನು, ಒಂದು ಕಡೆಗೆ ಏಕೀಕರಣ ಮಾಡಲು ನಡೆಸಿದ ಹೋರಾಟದ ಸಂದರ್ಭದಲ್ಲಿ, ಹೊಟ್ಟೆಯ ಕಿಚ್ಚಿಗೆ ಕಣ್ಣೀರು ಸುರಿಸು, ಒಟ್ಟಿಗೆ ಬಾಳುವ ತೆರದಲಿ ಹರಸು, ಎಂದು ಬಾರಿಸು ಕನ್ನಡ ಡಿಂಡಿಮವ ಗೀತೆಯ ಸಾಲುಗಳನ್ನು ನೆನಪಿಸಿಕೊಂಡರು. ಕುವೆಂಪುರವರು ತಮ್ಮ ಹಲವಾರು ಗೀತೆಯ ಸಾಲಿನಲ್ಲಿ ಶ್ರೀ ಬಸವೇಶ್ವರನನ್ನು ನೆನೆದಿದ್ದಾರೆ. ಶರಣರ, ಬಸವೇಶ್ವರರ ಆರ್ಥಿಕ ತತ್ವ, ಸಮಾನತೆಯ ತತ್ವ, ಸ್ತ್ರೀ ಸಮಾನತೆ, ಸಹಬಾಳ್ವೆ ಎಂಬ ಎಲ್ಲ ತತ್ವಗಳನ್ನೆ, ಕುವೆಂಪು ಅವರ ಸಾಹಿತ್ಯದಲ್ಲಿಯೂ ಕೂಡ ನಾವು ಕಾಣಬಹುದಾಗಿದೆ ಎಂದು ಚಿಂತಕಿ ಡಾ. ಪ್ರೇಮಾ ಸಿದ್ಧರಾಜು ಅವರು ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮಕ್ಕೆ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಐಎಎಸ್ ಅಧಿಕಾರಿ ದೆಹಲಿಯ ಕರ್ನಾಟಕ ಭವನದ ಉಪನಿವಾಸಿ ಆಯುಕ್ತರಾದ ಶ್ರೀ ಪ್ರಸನ್ನ ಹೆಚ್ ಅವರು ಮಾತನಾಡಿ, ಕಲ್ಬುರ್ಗಿ ಜಿಲ್ಲೆಯ ಬಸವಕಲ್ಯಾಣದ ಸಹಾಯಕ ಆಯುಕ್ತನಾಗಿ ಕಾರ್ಯ ನಿರ್ವಹಿಸುವಂತಹ ಸಂದರ್ಭದಲ್ಲಿ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಕಾರ್ಯ ನಿರ್ವಹಿಸುವ ಅವಕಾಶವೂ ಸಹ ಸಿಕ್ಕಿತ್ತು. ಆಗ ಶರಣರ ವಿಚಾರಗಳನ್ನು, ಅವರು ಬಾಳಿದ ಪವಿತ್ರ ಸ್ಥಳಗಳನ್ನು ಸಂರಕ್ಷಿಸಲು, ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಟ್ಟಿತ್ತು. ಅದರ ಭಾಗವಾಗಿ ಕೆಲಸ ಮಾಡಿದ ನನ್ನಲ್ಲೆ ಶರಣರ ಬಗೆಗೆ ಅತಿಯಾಗಿ ಒಲವು ಮತ್ತು ಅವರ ಜೀವನದ ಬಗೆಗೆ ಅತಿಯಾದ ಆಸಕ್ತಿ ಹುಟ್ಟಿ, ಶರಣರ ವಚನಗಳ ಬಗೆಗೆ ಅರಿಯುವ ಸದವಕಾಶ ನನ್ನದಾಗಿತ್ತು.ಕನ್ನಡದ ಮಟ್ಟಿಗೆ ಹನ್ನೆರಡನೆಯ ಶತಮಾನಕ್ಕಿಂತ ಮುಂಚೆ ಸಾಹಿತ್ಯಿಕವಾಗಿ ಹೆಚ್ಚಾಗಿ ಸಂಸ್ಕೃತಮಯವಾಗಿತ್ತು. ಆದರೆ ಹನ್ನೆರಡನೆಯ ಶತಮಾನದಲ್ಲಿ ಸಾಮಾನ್ಯವಾಗಿ ಆಡುಭಾಷೆಯಲ್ಲಿ ಸಾಹಿತ್ಯವನ್ನು ಅರಿಯಲು ಇತರೆ ಶರಣರು ಸೇರಿದಂತೆ ಬಸವಣ್ಣನವರು ಕೆಲಸ ಮಾಡಿದರು. ಸಾಂಪ್ರದಾಯವಾದಿಗಳ ಕೈಯಲ್ಲಿ ಸಿಕ್ಕಿ, ನಮ್ಮ ಸಮಾಜ ಕೆಟ್ಟು ಹೋಗಿತ್ತು. ಅದನ್ನು ಸುಧಾರಣೆಗೆ ತಂದು ಸಾಹಿತ್ಯಾತ್ಮಕವಾಗಿ ಸಮಾನತೆಯ ತತ್ವದ ಮೇಲೆ ಸಮಾಜವನ್ನು ರೂಪಿಸುವ ಕೆಲಸವನ್ನು ಮಾಡಿದವರು ಶರಣರು. ಕನ್ನಡ ಭಾಷೆ ಕೇವಲ ಒಂದು ಸಂವಹನ ಭಾಷೆಯಲ್ಲ, ಅದೊಂದು ಬೆಸುಗೆ ಬೆಸೆಯುವ ಭಾಷೆ. ಕುವೆಂಪುರವರ ಬಗೆಗೆ ಇವತ್ತು ನಡೆದ ಕಾರ್ಯಕ್ರಮದಲ್ಲಿ ಅವರ ಕವಿತೆಗಳನ್ನು, ಗೀತೆಗಳನ್ನು ಮಕ್ಕಳಿಂದ ಹಾಡಿಸಿದ್ದು ಸಂತೋಷದ ವಿಚಾರ. ಇವತ್ತಿನ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು, ಮಕ್ಕಳ ಮೂಲಕ ಮುಂದಿನ ಪೀಳಿಗೆಗೆ ಬಸವಣ್ಣನವರ, ಶರಣರ ವಚನಗಳನ್ನು ಮತ್ತು ಕುವೆಂಪು ಅವರ ವಿಚಾರಗಳನ್ನು ಪಸರಿಸುವ ಕೆಲಸವನ್ನು ಮಾಡುತ್ತಿರುವ ದೆಹಲಿಯ ಶರಣ ಸಾಹಿತ್ಯ ಪರಿಷತ್ತು ಅದ್ಭುತ ಕೆಲಸವನ್ನು ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಐಎಎಸ್ ಅಧಿಕಾರಿಗಳಾದ ಶ್ರೀ ಕೆಂಪ ಹೊನ್ನಯ್ಯನವರು ಮಾತನಾಡಿ, ಜಗದ ಕವಿ ಯುಗದ ಕವಿ ಕುವೆಂಪುರವರಿಗೆ ಮತ್ತು ಬಸವಾದಿ ಶರಣರಿಗೆ ಕಾರ್ಯಕ್ರಮದಲ್ಲಿ ಗೌರವವನ್ನು ಸಲ್ಲಿಸುತ್ತಿರುವುದು ಉತ್ತಮ ವಿಚಾರ. ಕುವೆಂಪು ರಚಿಸಿದ ಪಂಚಮಂತ್ರಗಳು, ಸಪ್ತ ಸೂತ್ರಗಳು ಮತ್ತು ವಿಶ್ವಮಾನವ ಸಂದೇಶ ಗೀತೆ ಎಂಬ ಮೂರು ತತ್ವಗಳು ಕೂಡ ಕೇಂದ್ರ ಸರ್ಕಾರದಿಂದ ನಿರ್ಮಿಸುತ್ತಿರುವ ಹೊಸ ಪಾರ್ಲಿಮೆಂಟಿನ ಕಟ್ಟಡದ ಮೇಲೆ ಎಲ್ಲ ಭಾಷೆಗಳಲ್ಲಿಯೂ ಭಾಷಾಂತರವಾಗಿ ನಾಮಫಲಕದ ಮೂಲಕ ಹಾಗೂ ವಿಶ್ವಸಂಸ್ಥೆಯ ಕಟ್ಟಡದ ಮೇಲೂ ಕೂಡ ಸ್ಥಾಪಿತವಾಗಿ ರಾರಾಜಿಸಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ನಿಕಟಪೂರ್ವ ಮುಖ್ಯಸ್ಥರು, ಜಾನಪದ ಚಿಂತಕರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತನಾಡಿ, ಕನ್ನಡದಲ್ಲಿ ಅತಿ ಹೆಚ್ಚು ಪುಸ್ತಕ ಬರೆದವರು ಕುವೆಂಪುರವರು. ಈಗಿನ ಸಂದರ್ಭದಲ್ಲಿ ಅವರ ಕನ್ನಡ ಪ್ರೇಮ ನಮಗೆಲ್ಲ ಪ್ರೇರಣೆಯಾಗುತ್ತದೆ. ನಾಶವಾಗುತ್ತಿರುವ

ಪ್ರಕೃತಿಯನ್ನು ವಿವರಿಸಿ ಅವರು ತಮ್ಮ ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಯಲ್ಲಿ, ಇಪ್ಪತ್ತೊಂದನೆ ಶತಮಾನದ ಪರಿಸರದ ಬಗೆಗಿನ ಕಳಕಳಿಯನ್ನು ವಿವರಿಸಿದ್ದರು. ವಿಶ್ವಮಾನವರಾಗಿ ಎಂಬ ಕರೆಯನ್ನು, ತಮ್ಮ ಸಾಹಿತ್ಯದ ಮೂಲಕ ಕೊಟ್ಟಿದ್ದಾರೆ. 21ನೇಯ ಶತಮಾನದಲ್ಲಿ ಅವರ ವಿಚಾರಗಳನ್ನು ಜಾರಿಗೆ ತರುವ ಅವಶ್ಯಕತೆಯಿದೆ. ನಾವು ಹೆಚ್ಚು ಹೆಚ್ಚು ವಿದ್ಯೆ, ಉದ್ಯೋಗವನ್ನು ಪಡೆಯುತ್ತ ಹೋದಂತೆ ಉದಾರವಾದಿಗಳಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ. ಆದರೆ ವಾಸ್ತವಿಕವಾಗಿ ನಾವುಗಳು ಹೆಚ್ಚು ಜಾತಿವಾದಿಗಳಾಗುತ್ತಿದ್ದೇವೆ. ಈ ರೀತಿಯಾದ ವಿಚಾರಗಳು ಹೋಗಿ ಸಮಾಜಮುಖಿ ಚಿಂತನೆ ತರಲು ಕುವೆಂಪು ವಿಚಾರಗಳು ಸೂಕ್ತ. ಈ ನಿಟ್ಟಿನಲ್ಲಿ ಕುವೆಂಪು ಮತ್ತು ಶರಣರ ವಿಚಾರಗಳನ್ನು ಒಟ್ಟಿಗೆ ಸೇರಿಸಿ ಪರಿಷತ್ತು ಕಾರ್ಯಕ್ರಮ ಆಯೋಜಿಸಿದಕ್ಕಾಗಿ ಅಭಿನಂದನೆಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕೊಡಗು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಹೇಶ್ ಅವರು ಮಾತನಾಡಿ ಪರಿಷತ್ತಿನ ದೆಹಲಿ ಘಟಕವು ಹಮ್ಮಿಕೊಂಡ ಕಾರ್ಯಕ್ರಮವನ್ನು ಶ್ಲಾಘಿಸುತ್ತಾ ಶರಣರ ಚಿಂತನೆಗಳನ್ನು ಸಮಾಜದಲ್ಲಿ ಬಿತ್ತುವ ಕೆಲಸ ಮಾಡೋಣವೆಂದು ಕರೆ ನೀಡಿದರು.

ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿದ್ವಾನ್ ಎಂ.ಜಿ. ಸಿದ್ಧರಾಮಯ್ಯನವರು ಮಾತನಾಡಿ, ಕನ್ನಡಿಗರನ್ನು ಒಂದೆಡೆ ಕೂರಿಸಿ, ಅವರ ಮಾತುಗಳನ್ನು ಕೇಳುವ ಬಹುದೊಡ್ಡ ಅವಕಾಶವನ್ನು ಪರಿಷತ್ತಿನ ದೆಹಲಿ ಘಟಕವು ಮಾಡುತ್ತಿದೆ. ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಎಲ್ಲ ಶರಣ–ಶರಣೆಯರನ್ನು ಸೇರಿಸಿಕೊಂಡು, ಕಾಶ್ಮೀರದಿಂದ ಬಂದಂತಹ ರಾಜರನ್ನು ಕೂಡ ತಮ್ಮೊಟ್ಟಿಗೆ ತೆಗೆದುಕೊಂಡು, ಶರಣರ ವಿಚಾರಗಳನ್ನು ಸಮಾಜಕ್ಕೆ ತಿಳಿಸಿ ಕೊಟ್ಟಂತೆ, ಎಲ್ಲಾ ಹೊರನಾಡ ಕನ್ನಡಿಗರನ್ನು ಒಟ್ಟಿಗೆ ಸೇರಿಸಿ ಶರಣರ ಚಿಂತನೆಗಳನ್ನು ಬಿತ್ತುತ್ತಿರುವ ಕಾರ್ಯಗಳ ಬಗ್ಗೆ ಪ್ರಶಂಶಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಘಟಕದ ಅಧ್ಯಕ್ಷರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಮಾತನಾಡಿ ಕರ್ನಾಟಕ ಸೇರಿದಂತೆ, ದೇಶದ ನಾನಾ ಭಾಗಗಳಿಂದ ಹಾಗೂ ಅಮೇರಿಕಾ ದೇಶಗಳಿಂದ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲ ಕನ್ನಡ ಮನಸ್ಸುಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಕಳೆದ ಒಂದು ವರ್ಷದಿಂದ ನಮ್ಮ ಪರಿಷತ್ತಿನ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಲು ಸ್ಥಳೀಯ ದೆಹಲಿ ಕನ್ನಡಿಗರ ಮಕ್ಕಳು ಮತ್ತು ಮಹಿಳೆಯರ ಶ್ರಮ ಬಹಳಷ್ಟಿದೆ. ತಮ್ಮ ಕಾರ್ಯಕ್ರಮದ ಯಶಸ್ಸಿಗೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಗುರುಗಾಂವ್, ನೋಯ್ಡಾ, ಭೀವಾಡಿ, ಜನಕಪುರಿ ಕನ್ನಡ ಕೂಟ ಸೇರಿದಂತೆ ದೆಹಲಿ ಒಕ್ಕಲಿಗ ಗೌಡ ಸಂಘ, ಮಕ್ಕಳ ಸಾಹಿತ್ಯ ಪರಿಷತ್ತು ಹೀಗೆ ಹಲವಾರು ಸಂಘ ಸಂಸ್ಥೆಗಳು ಎಲ್ಲ ಕಾರ್ಯಕ್ರಮಗಳಿಗೆ ಸಹಕರಿಸುತ್ತಾ ಯಶಸ್ಸಿಗೆ ಕಾರಣವಾಗಿದ್ದಾರೆ. ಕಾರ್ಯಕ್ರಮದಲ್ಲಿ ವಿಚಾರ ಮಂಡನೆ ಮಾಡಿದ ಡಾ. ಪ್ರೇಮಾ ಸಿದ್ಧರಾಜು ಅವರು ಶರಣರು ಮತ್ತು ಕುವೆಂಪುರವರ ಮೇಲೆ ಮಾಡಿದ ಚಿಂತನೆ, ತಮ್ಮ ಕಾಲೇಜು ದಿನಗಳ ಪಾಠಗಳನ್ನು ನೆನಪಿಸುವ ಹಾಗೆ ಮಾಡಿದೆ. ಅದಮ್ಯ ರತ್ನ, ಕನ್ನಡ ಭಾಷೆಗೆ ವಿಶೇಷ ಸ್ಥಾನಮಾನವನ್ನು ನೀಡಿದಂತಹ ವ್ಯಕ್ತಿ ಕುವೆಂಪು. ಹುಟ್ಟಿದ ಮಕ್ಕಳು ವಿಶ್ವಮಾನವರಾಗಿಯೇ ಹುಟ್ಟುತ್ತಾರೆ, ಆದರೆ ಬೆಳೆಯುತ್ತ ಬೆಳೆಯುತ್ತ, ಅಕ್ಕಪಕ್ಕದ ಸಮಾಜದ ವಾತಾವರಣದೊಂದಿಗೆ ಅಂಟಿ ಜಾತಿ, ಮತ, ಪಂಥದ ಬಲೆಯಲ್ಲಿ ಸಿಲುಕಿಕೊಳ್ಳುತ್ತಾರೆ. ಅದನ್ನ ತೊಡಗಿಸುವ ಚಿಂತನೆಗೆ, ನಮ್ಮ ಸಮಾಜ ಮುಂದಾಗಬೇಕು ಎನ್ನುತ್ತಾ ಕಾರ್ಯಕ್ರಮದ ಯಶಸ್ಸಿಗೆ ಭಾಗಿಯಾದ ಎಲ್ಲರಿಗೂ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ, ದೆಹಲಿ ಘಟಕದ ಕಾರ್ಯದರ್ಶಿಗಳಾದ ಶ್ರೀ ಕೆ.ಎಸ್. ಮೂರ್ತಿಯವರು ಮಾತನಾಡಿ, ನಾವು ಒಮ್ಮೆ ಕನ್ನಡಿಗರಾಗಿ ಹುಟ್ಟಿದ ಮೇಲೆ ದೆಹಲಿಯಲ್ಲಿರಲಿ, ದೇಶದ ಅಥವಾ ವಿಶ್ವದ ಯಾವುದೇ ಭಾಗದಲ್ಲಿರಲಿ ಎಂದೆಂದಿಗೂ ಕನ್ನಡಿಗರಾಗೇ ಇರುತ್ತೇವೆ ಎಂದರು. ಕಳೆದ ವರ್ಷ 2020 ಡಿಸೆಂಬರ್ 29 ರಂದು ಕುವೆಂಪು ಅವರ ಜನ್ಮ ಜಯಂತಿಯ ಅಂಗವಾಗಿ ಪ್ರಾರಂಭವಾದ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟವು ಆನ್‌ಲೈನ್ ವೇದಿಕೆಯ ಮೂಲಕ ಹನ್ನೆರಡು ರಚನಾತ್ಮಕ, ಸೃಜನಾತ್ಮಕ, ಸಾಹಿತ್ಯಾತ್ಮಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೀಡುತ್ತಾ ಬಂದಿದೆ ಪರಿಷತ್ತು ಇಲ್ಲಿಯವರೆಗೆ ಆಯಾ ತಿಂಗಳುಗಳ ಪ್ರಮುಖ ದಿನಾಚರಣೆಗಳನ್ನ, ವಿಶೇಷತೆಗಳನ್ನ ಒಳಗೊಂಡ ಮಹಿಳಾ ದಿನಾಚರಣೆ, ಬಸವೇಶ್ವರ ಜಯಂತಿ, ಸಂಸ್ಥಾಪಕರ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವ ಆಚರಣೆ ಹೀಗೆ ಕನ್ನಡ ಭಾಷೆ, ಸಂಸ್ಕೃತಿ, ನಾಡು ನುಡಿ ಬಗ್ಗೆ ಹಾಗೂ ಶರಣ ಸಾಹಿತ್ಯ, ಸಂಸ್ಕೃತಿ ಚಿಂತನೆಗಳನ್ನು ಪ್ರಸರಿಸುವ ಹಲವಾರು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದೆ ಎಂದು ಸಂತಸ ವ್ಯಕ್ತಪಡಿಸಿದರು. ಮಾನ್ಯ ಸಂಸದರು ವಿಜ್ಞಾನಿಗಳು, ಸಾಮಾಜಿಕ ಚಿಂತಕರು, ಯೋಗ ಸಾಧಕರು, ಹಿರಿಯ ಆಡಳಿತ ಅಧಿಕಾರಿಗಳು, ಸಾಹಿತಿಗಳು, ಮಕ್ಕಳು, ಮಹಿಳೆಯರು, ಕಲಾವಿದರು, ಪದಾಧಿಕಾರಿಗಳು, ವಿದ್ಯಾರ್ಥಿಗಳು ಸೇರಿಕೊಂಡು ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ ಎಂದು ಪರಿಷತ್ತಿನ ಒಂದು ವರ್ಷದ ಹಾದಿಯನ್ನು ಮೆಲುಕು ಹಾಕುತ್ತಾ, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿದರು. ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಮಾತನಾಡುತ್ತಾ 20ನೇ ಶತಮಾನದಲ್ಲಿ ನಮ್ಮ ರಾಜ್ಯ ರಾಷ್ಟ್ರ ಕಂಡ ಅತ್ಯಂತ ಶ್ರೇಷ್ಠ ಕವಿ, ಜ್ಞಾನಪೀಠ ಪ್ರಶಸ್ತಿಗೆ ಪುರಸ್ಕೃತರಾದ ಪ್ರಪ್ರಥಮ ಕನ್ನಡದ ರಾಷ್ಟ್ರಕವಿ ಹಾಗು ವಿಶ್ವಮಾನವ ಸಂದೇಶವನ್ನು ಸಾರಿದವರು ನಮ್ಮ ಕುವೆಂಪುರವರು ಎಂದು ಅವರ ಜನ್ಮದಿನಾಚರಣೆಯ ಶುಭಾಶಯಗಳೊಂದಿಗೆ ತಮ್ಮ ನುಡಿನಮನ ಅರ್ಪಿಸಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ, ಕರ್ನಾಟಕ, ಪಶ್ಚಿಮ ಬಂಗಾಳ, ಅಮೆರಿಕಾ ಸೇರಿದಂತೆ ಹಲವಾರು ಕನ್ನಡಿಗರು ಭಾಗವಹಿಸಿದ್ದರು. ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹಾಂತೇಶ ಅಗಡಿ, ಜೆ.ಎಸ್. ಎಸ್. ಸಂಸ್ಥೆಯಿಂದ ಡಾ. ಜಗದೀಶ್ ಮತ್ತು ಶ್ರೀ ಮನೋಜ್, ಮೈಸೂರು ಕದಳಿ ಮಹಿಳಾ ವೇದಿಕೆಯ ಮುಖ್ಯಸ್ಥರಾದ ಶ್ರೀಮತಿ ಶಾರದಾ, ಶರಣ ಸಾಹಿತ್ಯ ಪರಿಷತ್ತು ವೇದಿಕೆಯ ಹಿತೈಷಿಗಳಾದ ಸುಧಾ ಮೃತ್ಯುಂಜಯ ಅವರುಗಳು ಸಹಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಈ ಕಾರ್ಯಕ್ರಮದಲ್ಲಿ ಕವನ ಗಾಯನ, ವಚನ ಗಾಯನ, ವಚನ ವಾಚನ ಮಾಡಿದ ಕುಮಾರಿ ನೂತನ ಕೈಕಾಡೆ, ಮಾಸ್ಟರ್ ಗಗನ್, ಕುಮಾರಿ ಶ್ರೇಯಾ ಪ್ರಭಾಕರ್, ಮಾಸ್ಟರ್ ಓಂಕಾರೇಶ್ವರ್ ಸಿ, ಕುಮಾರಿ ಸಹನಾ ತಿಮ್ಮಪ್ಪ, ಸೇರಿದಂತೆ ದೆಹಲಿ ಕನ್ನಡತಿಯಾದ ಶ್ರೀಮತಿ ಜಯಶ್ರೀ ಬಸವರಾಜು ಅವರು ಎಲ್ಲರಿಗೂ ಕುವೆಂಪುರವರ ಸಾಹಿತ್ಯದ ರಸದೌತಣ ನೀಡಿದರು. ಪಶ್ಚಿಮ ಬಂಗಾಳದ ಕೊಲ್ಕತ್ತಾದಿಂದ ಭಾಗವಹಿಸಿದ ಅಲ್ಲಿನ ಕರ್ನಾಟಕ ಅಸೋಸಿಯೇಷನ್ನಿನ ವಿದ್ವಾನ್ ಪಿ.ವಿ. ಸಾಯಿರಾಮ್ ಅಯ್ಯರ್ ಮತ್ತು ಅವರ ತಂಡವು ಅದ್ಭುತವಾಗಿ ನಾಡಗೀತೆಯನ್ನು ಹಾಡಿ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಡಾ. ಗುರುರಾಜ್ ಸಂಗೊಂದಿಮಠ್ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಸದಸ್ಯರಾದ ಶ್ರೀಮತಿ ಮೈಥಿಲಿ ಅಟ್ಟಾವರ್ ಸ್ವಾಗತಿಸಿದರು. ಶ್ರೀಮತಿ ಆರಾಧನ ಕೆ.ಸಿ ಮತ್ತು ಶ್ರೀ ಯಲ್ಲಾಲಿಂಗ ಕೊಪ್ಪದ ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಘಟಕದ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ್ ಅವರು ಎಲ್ಲರನ್ನೂ ವಂದಿಸಿದರು. ◘

**ಅಭಿಮತ ವರದಿ**



# ‘ಮಕ್ಕಳ ರಂಗಭೂಮಿಯಲ್ಲಿ ಪ್ರೇಮಾ ಕಾರಂತ ಶಿಷ್ಯರು ಕಂಡಂತೆ’ ಕುರಿತ ಸಂವಾದ

ಕನ್ನಡ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿದ ರಂಗಭೂಮಿ ದಿಗ್ಗಜರಾದ ಪ್ರೇಮಾ ಕಾರಂತ ಅವರು ಎಂ.ಕೆ. ಇಂದಿರಾ ಅವರ ಕಾದಂಬರಿ ಆಧಾರಿತ ‘ಫಣಿಯಮ್ಮ’ ಚಿತ್ರದ–ನಿರ್ದೇಶನ ಹಾಗೂ ರಂಗಭೂಮಿಗೆ ಸಲ್ಲಿಸಿದ ಅತ್ಯಮೂಲ್ಯ ಕೊಡುಗೆಗಳಿಂದ ನಾಡಿನ ಜನರ ಮನಸ್ಸಿನಲ್ಲಿ ಹಚ್ಚ ಹಸಿರಾಗುಳಿದಿದ್ದಾರೆ. ಮಕ್ಕಳ ನಾಟಕ ಪ್ರಯೋಗ ಮಾಡಿದವರು. ‘ಸೋಲಿಸಬೇಡ ಗೆಲಿಸಯ್ಯ’ ಇದು ಪ್ರೇಮಾ ಕಾರಂತರ ಪ್ರಸಿದ್ಧ ಆತ್ಮಚರಿತ್ರೆ, ಬಿ.ವಿ. ಕಾರಂತರು ಮತ್ತು ಪ್ರೇಮಾ ಕಾರಂತರು ಕನ್ನಡ ಕಲಾ ಲೋಕದಲ್ಲಿ ಬೆಳೆಸಿದ ಹೊಸತನ ಎಂದೆಂದಿಗೂ ಅಮರ.

‘ದಿನಕರ’ ಫೌಂಡೇಶನ್ ಸೆಪ್ಟೆಂಬರ್ 5 ರಂದು ಏರ್ಪಡಿಸಿದ್ದ ‘ಮಕ್ಕಳ ರಂಗಭೂಮಿಯಲ್ಲಿ ಪ್ರೇಮಾ ಕಾರಂತ ಶಿಷ್ಯರು ಕಂಡಂತೆ’ ಎಂಬ ವಿಷಯದ ಮೇಲೆ ಕುರಿತ ಜೂಮ್ ಮೀಟಿಂಗ್‌ನ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಪ್ರಸಾಧನ ತಜ್ಞರಾದ ರಾಮಕೃಷ್ಣ ಕನ್ನರಪಾಡಿ ಅವರು ಪ್ರೇಮಾ ಕಾರಂತರೊಂದಿಗಿನ ಒಡನಾಟವನ್ನು ವಿವರಿಸುತ್ತಾ ಅವರ ಸಾಧನೆ, ಬೋಧಿಸಿದ ಶಿಕ್ಷಣದ ತತ್ವ, ಕಾರ್ಯಶೈಲಿ, ದೃಢಸಂಕಲ್ಪ ನಮಗೆಲ್ಲಾ ಮಾದರಿಯಾಗಿವೆ. ರಂಗಭೂಮಿಯಲ್ಲಿ ಇವರೊಂದಿಗೆ ಕೆಲಸ ಮಾಡುತ್ತಾ ಕಲಿತ ಜೀವನ ಪಾಠ ಇಂದಿಗೂ ದಾರಿದೀಪವಾಗಿದೆ ಎಂದು ನೆನಪಿಸಿಕೊಳ್ಳುವುದರೊಂದಿಗೆ ಅವರಿಗೆ ನುಡಿ ನಮನಗಳನ್ನು ಸಲ್ಲಿಸಿದರು.

ಉಪನ್ಯಾಸಕರು ಹಾಗೂ ರಂಗಕರ್ಮಿ ಡಾ. ಎಂ.ಎಸ್. ವಿದ್ಯಾ ಅವರು ಮಾತನಾಡಿ ಪ್ರೇಮಾ ಕಾರಂತ ಅವರ ಬೇಸಿಗೆ ಶಿಬಿರದ ವಿದ್ಯಾರ್ಥಿಯಾಗಿದ್ದ ನಾನು ಅವರೊಂದಿಗಿನ ನೆನಪು ಸದಾ ಹಸಿರಾಗಿರುತ್ತದೆ. ರಂಗಭೂಮಿಯ ಎಲ್ಲಾ ಆಯಾಮಗಳ ಕುರಿತು ಬಹು ಮಾರ್ಮಿಕವಾಗಿ ಹಾಗೂ ಮನದಟ್ಟಾಗುವಂತೆ ಅವರು ತಿಳಿಸಿಕೊಡುತ್ತಿದ್ದರು ಎಂದರು.

ಆಕಾಶವಾಣಿ ಸಹ ನಿರ್ದೇಶಕ ಎನ್. ರಘು ಅವರು ಮಾತನಾಡಿ, ‘ಅಲಿಬಾಬಾ ಮತ್ತು ನಲ್ವತ್ತು ಜನ ಕಳ್ಳರಿರಬೇಕಿದ್ದ ನಾಟಕದಲ್ಲಿ ಅರವತ್ತು ಜನ ಕಳ್ಳರು! ಇದು ಸಾಧ್ಯವಾಗಿಸುವುದು ಪ್ರೇಮಾ ಕಾರಂತ ಅವರ ನಾಟಕದ ಮೋಡಿಯೇ ಹಾಗೇ ತಾಂತ್ರಿಕ, ಬ್ಯಾಕ್ ಸ್ಟೇಜ್, ಇತ್ಯಾದಿ ಅಗತ್ಯ ವಿಷಯಗಳ ಕುರಿತು ಶಿಬಿರದಲ್ಲಿ ಚರ್ಚಿಸುತ್ತಿದ್ದರು ಎಂದು ನೆನೆಸಿಕೊಂಡರು.

ಬೆನಕ ಮಕ್ಕಳ ನಾಟಕ ತಂಡದ 25ನೇ ವರ್ಷಾಚರಣೆಗೆ ಪ್ರೇಮಾ ಕಾರಂತ ಅವರು ತಮ್ಮನ್ನು ಕರೆದು ಸನ್ಮಾನ ಮಾಡಿ ಆಶೀರ್ವದಿಸಿರುವುದನ್ನು ಅವರು ಜ್ಞಾಪಿಸಿಕೊಂಡರು. ನೆರಳಚ್ಚು ಪ್ರತಿ ಯಂತ್ರ ಇಲ್ಲದಿದ್ದ ಆ ಕಾಲದಲ್ಲಿ ನಾಟಕದ ಸ್ಕ್ರಿಪ್ಟ್ ನಾವೇ ಬರೆಯಬೇಕಾಗಿದ್ದರಿಂದ ಸ್ಫುಟ ಹಾಗೂ ಶುದ್ಧ ಬರವಣಿಗೆಗೆ ಅನುಕೂಲವಾಯಿತು. ಆಂತರಿಕವಾಗಿ ಶಿಸ್ತು, ಶ್ರದ್ಧೆ, ಸಿದ್ಧತೆ ರೂಢಿಸಿಕೊಳ್ಳಲು ಈ ಶಿಬಿರದಿಂದ ಸಾಧ್ಯವಾಯಿತು ಎಂದರು. ವಿ.ಕೆ. ಗೋಕಾಕರ ‘ಭಾರತ ಸಿಂಧು ರಶ್ಮಿ’ ಕಾವ್ಯವನ್ನು ನಾಟಕ ರೂಪಾಂತರಿಸಬೇಕಾದ ಸಂದರ್ಭದಲ್ಲಿ ತಮಗೆ ಪ್ರೇರಣೆ ಬೆನಕ ತಂಡದಲ್ಲಿ ಕಲಿತ ಹಿನ್ನೆಲೆ. ಬಿ.ವಿ. ಕಾರಂತ ದಂಪತಿಗಳ ಆದರ್ಶಗಳು ಹಾಗೂ ಅವರ ಆಶೀರ್ವಾದದ ಶ್ರೀರಕ್ಷೆ ಶಿಕ್ಷಕರ ದಿನಾಚರಣೆ ಈ ಸಂದರ್ಭ ರಂಗ ಶಿಕ್ಷಕರಾಗಿ ನಮಗೆ ಕಲಿಸಿದ ಗುರುಗಳ ಸ್ಮರಣೆ ಮಾಡುವ ಸದಾವಕಾಶ ಕಲ್ಪಿಸಿಕೊಟ್ಟಿರುವ ‘ದಿನಕರ’ ಫೌಂಡೇಶನ್‌ಗೆ ಧನ್ಯವಾದ ಅರ್ಪಿಸಿದರು.

ಚಿತ್ರ ಹಾಗೂ ಲಯವಾದ್ಯ ಕಲಾವಿದರಾದ ರಾಘವೇಂದ್ರ, ಕೆ ಅವರು ಮಾತನಾಡಿ, ಬಿ.ವಿ. ಕಾರಂತರ ಹೆಸರು ಹೇಳಿದ ತಕ್ಷಣ ನೆನಪಾಗುವುದು ರಂಗಸಂಗೀತ. ನಾಟಕಗಳಿಗೆ ಉತ್ತಮ ಸಂಗೀತ ನೀಡಬಲ್ಲವರಾಗಿದ್ದರು. ರಂಗ ಸಂಗೀತಕ್ಕೊಂದು ಹೊಸ ಆಯಾಮ ಅವರು ನೀಡಿದರು. ಅವರು ಹಾಕಿಕೊಟ್ಟ ಭದ್ರಬುನಾದಿಯೇ ಸಾಕಷ್ಟು ಜನರಿಗೆ ಸಾಧನೆಗೆ ಮುನ್ನುಡಿ ಬರೆದ ಪ್ರೇರಣಾದಾಯಕ ವ್ಯಕ್ತಿ ಪ್ರೇಮಾ ಕಾರಂತ. ಕನ್ನಡ ರಂಗಭೂಮಿಗೆ ಅವರ ಕೊಡುಗೆ ಅಪಾರ ಎಂದು ಹೇಳಿದರು.

ಮಾಧ್ಯಮ ಕಾರ್ಯದರ್ಶಿ ಡಾ. ರಾಕೇಶ್ ಶರ್ಮಾ, ಸಂಗೀತ ಶಿಕ್ಷಕರಾದ ಶ್ರುತಿ ಭಿಡೆ ಹಾಗೂ ರಂಗ ಕಲಾವಿದ ಚಂದ್ರಕೀರ್ತಿ ಬಿ ಅವರು ಸಂವಾದದಲ್ಲಿ ಭಾಗವಹಿಸಿ ಪ್ರೇಮಾ ಕಾರಂತ ಅವರ ಕುರಿತಾಗಿ ಮಾತನಾಡಿದರು.

ಮಾಧ್ಯಮ ಸಂವಹನ ವಿದ್ಯಾರ್ಥಿ ಪ್ರಜ್ವಲ್ ಎಸ್ ಹಾಗೂ ರಂಗ ಕಲಾವಿದೆ ಅಕ್ಷತಾ ರಾವ್ ಮಾಡಿದ ‘ಅಳಿಲು ರಾಮಾಯಣ’ ನಾಟಕದ ಸಂಭಾಷಣೆ ಕಾರ್ಯಕ್ರಮಕ್ಕೆ ಮೆರಗು ತಂದಿತು. ರಾಮನ ಕಾಲ್ಗಳ ಕಮಲಕ್ಕೆ, ಅಳಿಲಿನ ಒಲವಿನ ಒಕ್ಕಣಿಕೆ ಹಾಗೂ ನಿದ್ದೆ ಮಾಡಬೇಕು, ಗದ್ದಲ ಸಾಕು ಮುದ್ದು ಕಂದ. ರಂಗ ಗೀತೆಗಳು ಸಾಂದರ್ಭಿಕವಾಗಿ ಮೂಡಿಬಂದವು. ಡಾ. ರಾಕೇಶ್ ಶರ್ಮಾ ಹಾಗೂ ಶ್ರುತಿ ಭಿಡೆ ಅವರ ಸುಮಧುರ ಧ್ವನಿಯಲ್ಲಿ ಬಿ.ವಿ. ಕಾರಂತ ಸಂಗೀತ ಸಂಯೋಜನೆಯ ಪ್ರೇಮಾ ಕಾರಂತ ನಿರ್ದೇಶನದ ನಾಟಕಗಳ ರಂಗಗೀತೆಗಳನ್ನು ಸಂವಾದದಲ್ಲಿ ಪ್ರಸ್ತುತಪಡಿಸಿದರು.

‘ಪಂಜರ ಶಾಲೆ’ಯ ಹಾರೋಣ ಬಾ, ಬಂತೈ ಬಂತೈ ವಸಂತಾ.. ಹೂವು ಹಣ್ಣು ಹಂಚುತ್ತಾ.. ದೂರ. ದೂರ.. ದೂರ.. ಗಗನಕೆ ಕ್ಷಿತಿಜಕೆ ಹಾರೋಣ ಬಾ, ಹಾರೋಣ ಬಾ, ಗರಿಗಳ ಕೆದರಿ ಚುಂಚವಾ ಚಾಚಿ ಅಡವಿ ಬಯಲು ದಾಟಿ, ದೂರ ದೂರ.. ಹಾಡು ಡಾ. ರಾಕೇಶ್ ಶರ್ಮಾ ಹಾಗೂ ಶ್ರುತಿ ಭಿಡೆ ಅವರ ಧ್ವನಿಯಲ್ಲಿ ಸುಶ್ರಾವ್ಯವಾಗಿ ತೇಲಿ ಬಂತು. ರಂಗಕರ್ಮಿ ಶಿವಾನಂದ ಇಂಗಳೇಶ್ವರ ಕಾರ್ಯಕ್ರಮ ನಿರ್ವಹಿಸಿದರು. ಟಿ.ಎಸ್. ರಮೇಶ ತಾಂತ್ರಿಕ ಸಹಾಯ ಒದಗಿಸಿದರು, ಸಂತೋಷ ಉಪಾಧ್ಯಾಯ ವಂದನಾರ್ಪಣೆ ಸಲ್ಲಿಸಿದರು.

***ದಿನಕರ ಫೌಂಡೇಶನ್,*** ನವದೆಹಲಿ

## ‘ಇಲ್ಲ’ ಎಂಬ ಅಕವಿತೆ

ಅಂದು ಎಂದೋ ನಾ ಹುಟ್ಟಿದ ದಿನ
ಅಂದು ಅಪ್ಪ ಅಮ್ಮ ಅಜ್ಜಿ ತಾತ ಅವರಿವರು
ಎಲ್ಲಾ ಇದ್ದ ದಿನ;
ನಾನು ಏಕೆ ಇದ್ದೀನಿ ಎಂಬ ಪ್ರಶ್ನೆ ಬೇಕೇ ಇಲ್ಲ
ಏಕೆಂದರೆ ವೃತ್ತಿ ಪ್ರವೃತ್ತಿಯೊಡನೆ ಗೃಹಸ್ಥ ಜೀವನಕ್ಕೆ
ಹೊಂದುಕೊಂಡ ನನಗೆ ಯಾಕಿರಬೇಕು ಎಂಬ ಪ್ರಶ್ನೆ ಬರಲೇ ಇಲ್ಲ
ಇಂದು ನನಗೆ, ಅಂದಿಲ್ಲ, ಹಿಂದಿಲ್ಲ, ಮುಂದಿಲ್ಲ ಅಕ್ಕಪಕ್ಕ ಇಲ್ಲ
ನೆನ್ನೆಯಿಲ್ಲ ನಾಳೆಯಿಲ್ಲ ಮೊನ್ನೆ ಇಲ್ಲ ನಾಡಿದ್ದಿಲ್ಲ, ಕಂಡಿಲ್ಲ ಕೇಳಿಲ್ಲ
ಹೇಳಿಲ್ಲ ಏನೆಲ್ಲಾ ಮಾಡಿಲ್ಲ, ಬೇಡಿಲ್ಲ, ಸಾಕು ಬೇಕಿಲ್ಲ
ನಾನಿದ್ದೇನೆ ಎಂಬ ಪ್ರಶ್ನೆ ಬೇಕೇ ಇಲ್ಲ.
ಅವರಿದ್ದಾರೆ, ಇವರಿದ್ದಾರೆ, ಗೆಳೆಯ ಗೆಳತಿಯರಿದ್ದಾರೆ ಅಕ್ಕಪಕ್ಕ ಇದ್ದಾರೆ
ಎಂದು ಬದುಕುತ್ತಿರುವ ಬೇಕು ಬೇಡೆನ್ನುವ ಜೀವ ಬೇಕಿಲ್ಲ
ಅಂದು ಬೇಕೆನಿಸಿದೆಲ್ಲವೂ ಇಂದು ಬೇಕಿಲ್ಲ
ಹಳೆಯದೆಲ್ಲವನೆಲ್ಲ ಎತ್ತೆಸೆದು ಹೊಸದಿರಲಿ ಎನ್ನುವ
ಬಯಕೆ ಇಲ್ಲವೇ ಇಲ್ಲ
ಹಿತ ಮಿತಕೆ ಕಡಿಮೆ ಇಲ್ಲ; ವಿಶಾದಕ್ಕೆಡೆಯಿಲ್ಲ
ಜೀವನದ ಸಾಧ್ಯತೆಗಳೆಲ್ಲವನೂ ವಿಶ್ವಾಸದಿಂದ ಸಾಗಿಸಿದ
ಈ ಶರೀರಕ್ಕೆ ಈ ಜೀವದ ಮನಸ್ಸಿಗೆ ಇನ್ನೇನುಬೇಕು.
ಜೀವ ನೀ ಬಳಿಯಿರುವೆ ಎಂದೆಂಬುದೇ ಸಾಕೆನಗೆ
ಅದಕ್ಕಿಂತ ಸೌಭಾಗ್ಯ ಯಾವುದೆನಗೆ
ಸಾಕಿನ್ನು ಈ ಜೀವ ನಿನ್ನ ಬಳಿ ನಸುನಗುತ ಬರಲಾಸೆ
ಎಂದೆಂದೂ ನಿನ್ನ ಬಳಿ ಇರುವ ಆಸೆ ದೇವ!

***ಡಾ. ಅಹಲ್ಯಾಚಿಂತಾಮಣಿ***

# ‘ಕನ್ನಡದ ಕಂಪು ಕುವೆಂಪು’-ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಕುವೆಂಪು ಜನ್ಮ ದಿನಾಚರಣೆ



ರಾಷ್ಟ್ರಕವಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ರಸಋಷಿ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ‘ಕನ್ನಡದ ಕಂಪು ಕುವೆಂಪು’ ಕಾರ್ಯಕ್ರಮವನ್ನು ದಿನಾಂಕ 29.12.2021 ರಂದು ಆಯೋಜಿಸಲಾಗಿತ್ತು. ಕೋವಿಡ್ ನಿಯಾಮಾವಳಿ ಪಾಲನೆ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಆಯೋಜಿಸಿದ್ದ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಲೆಯ ಸ್ವಾಗತ ಕೊಠಡಿಯಲ್ಲಿ ಸಾಂಕೇತಿಕವಾಗಿ ಮಾಡಲಾಯಿತು. ಕಾಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಟಿ.ಎಂ. ಮೈಲಾರಪ್ಪ, ಹಾಗೂ ಉಪಸ್ಥಿತರಿದ್ದ ಉಪಾಧ್ಯಕ್ಷರಾದ ಶ್ರೀ ಎನ್.ಪಿ. ಚಂದ್ರಶೇಖರ್, ಹಾಗೂ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಕವಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈಯ್ಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ನಾಡು ಕಂಡ ಶ್ರೇಷ್ಟ ಸಾಹಿತಿ ಕುವೆಂಪು. ಕನ್ನಡ ನಾಡುನುಡಿಯ ಅನನ್ಯ ಪ್ರೀತಿಯನ್ನು ಮನದುಂಬಿ, ಮೈದುಂಬಿಸಿಕೊಂಡವರು. ಅವರ ಸಾಹಿತ್ಯದಲ್ಲಿ ಮಲೆನಾಡಿನ ಪರಿಸರ ಮತ್ತೆಮತ್ತೆ ಮೇಳೈಸಿದೆ. ವೈಚಾರಿಕತೆಯ ಜೊತೆ ವೈಜ್ಞಾನಿಕತೆಯ ಬಗ್ಗೆ ಅರಿವು ಮೂಡಿಸಿ, ಇಂಗ್ಲಿಷ್ ಭಾಷೆಯ ಪ್ರಭುತ್ವದಿಂದ ಕನ್ನಡ ಭಾಷೆಗೆ ಕೀಳರಿಮೆ ಮೂಡಿದಾಗ ಕನ್ನಡ ಡಿಂಡಿಮವನ್ನು ಬಾರಿಸಿ ಜನತೆಯನ್ನು ಎಚ್ಚರಿಸಿದವರು. ನಮ್ಮ ಶಿಕ್ಷಣ ಸಂಸ್ಥೆಯು ಹಲವಾರು ವರ್ಷಗಳಿಂದ ಕನ್ನಡ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಜನ್ಮದಿನವನ್ನು ಆಚರಿಸುತ್ತಾ ಬರುತ್ತಿದೆ. ಈ ಮೂಲಕ ಮಕ್ಕಳಲ್ಲಿ ಸಾಹಿತ್ಯದ ಒಲವು ಮೂಡಿಸುವಲ್ಲಿ ಇಂತಹ ಕಾರ್ಯಕ್ರಮ ಅರ್ಥಪೂರ್ಣವಾದುದು ಹಾಗೂ ಅನುಕರಣೀಯವಾದುದು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ನೋಯ್ಡಾದ ಜೆ.ಎಸ್.ಎಸ್. ಅಕಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್‌ನ ಪ್ರಾಂಶುಪಾಲರಾದ ಡಾ. ಜಿ.ಎಂ. ಪಾಟೀಲ್ ಅವರು ಮಾತನಾಡಿ ಕನ್ನಡದ ಧೀಮಂತ ಕವಿಗಳಲ್ಲಿ ಕುವೆಂಪು ಅಗ್ರಗಣ್ಯರು. ಮಲೆನಾಡಿನ ನಿಸರ್ಗ ಚೆಲುವಿನ ಜೊತೆಗೆ ಅದರ ಒಡಲಿನ ಸಾಮಾಜಿಕ ಬದುಕನ್ನು, ಸ್ಥಿತ್ಯಂತರಗಳನ್ನು ಎಳೆಎಳೆಯಾಗಿ ದಾಖಲಿಸಿದವರು. ಅವರ ವಿಶ್ವಮಾನವ ಸಂದೇಶ ಎಲ್ಲ ಕಾಲಕ್ಕೂ ಪ್ರಸ್ತುತವಾಗಿದ್ದು, ಇದನ್ನು ವಿದ್ಯಾರ್ಥಿಗಳಿಗೆ ಇಂತಹ ಕಾರ್ಯಕ್ರಮದ ಮೂಲಕ ತಲುಪಿಸುತ್ತಿರುವುದು ಅಭಿನಂದನೀಯ ವಿಚಾರ ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಸಂಸ್ಥೆಯ ಉಪಾಧ್ಯಕ್ಷರಾದ ಚಂದ್ರಶೇಖರ್ ಅವರು ಮಾತನಾಡಿ ಸಹ್ಯಾದ್ರಿಯ ಸೂರ್ಯ, ಕನ್ನಡಕ್ಕೆ ವಿಶ್ವಖ್ಯಾತಿಯನ್ನು ತಂದು ಕೊಟ್ಟ ರಾಷ್ಟ್ರ ಕವಿ ಕುವೆಂಪು ಅವರ ಬರಹಗಳನ್ನು ನಮ್ಮ ಕನ್ನಡ ಶಾಲೆಯಲ್ಲಿರುವ ಹಿಂದಿ, ಇಂಗ್ಲಿಷ್ ಪಂಜಾಬಿ, ಉರ್ದು, ಭಾಷೆಗಳ ಶಿಕ್ಷಕರು ಮತ್ತು ಪ್ರತಿಭಾವಂತ ಮಕ್ಕಳುಗಳಿಂದ ಅನುವಾದಿಸುವ ಕೆಲಸಕ್ಕೆ ಪ್ರೋತ್ಸಾಹ ನೀಡಿದರೆ ಕನ್ನಡವನ್ನು ಬೆಳೆಸಲು ಮತ್ತು ನಮ್ಮ ಶಾಲೆಯಲ್ಲಿ ಕನ್ನಡದ ವಾತಾವರಣವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಟಿ.ಎಂ. ಮೈಲಾರಪ್ಪ ಅವರು ಬರೆದಂತೆ ಬದುಕಿದ, ಬದುಕಿದಂತೆ ಬರೆದವರು ಕುವೆಂಪು. ತಮ್ಮ ವೈವಿಧ್ಯಪೂರ್ಣ ಬರವಣಿಗೆಯಿಂದ ಕನ್ನಡಕ್ಕೆ ವಿಶ್ವಮನ್ನಣೆಯನ್ನು ದೊರಕಿಸಿ ಕೊಟ್ಟ ಕವಿ. ಮಕ್ಕಳ ಸಾಹಿತ್ಯದಿಂದ ಮಹಾಕಾವ್ಯದವರೆಗೆ ಅವರ ಸಾಹಿತ್ಯದ ವಿಸ್ತಾರತೆಯನ್ನು ಕಾಣುತ್ತೇವೆ. ಚಿಕ್ಕಂದಿನಿಂದಲೇ ಮಲೆನಾಡಿನ ಪರಿಸರದಲ್ಲೆ ಬೆಳೆದ ಕುವೆಂಪು ಅವರ ಅಪಾರವಾದ ಪರಿಸರ ಪ್ರೇಮ ಅವರ ಕಾವ್ಯದಲ್ಲಿ ಜೀವಂತವಾಗಿ ಮೇಳೈಸಿದೆ. ಕುವೆಂಪು ಹೆಸರಲ್ಲೇ ಕಂಪಿದೆ. ಇದು ಕನ್ನಡದ ಕಂಪು. ಈ ಕಂಪನ್ನು ಮಕ್ಕಳಿಗೆ ಪಸರಿಸುವ ಉತ್ತಮ ಕಾರ್ಯವನ್ನು ದೆಹಲಿ ಕನ್ನಡ ಶಾಲೆ ಮಾಡುತ್ತಿದೆ. ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ ಮೂಡಲು ಸಾಹಿತ್ಯದ ಅಗತ್ಯವಿದೆ. ಈ ನಿಟ್ಟಿನಲ್ಲಿ ಇಂತಹ ಅರ್ಥಪೂರ್ಣ ಕಾರ್ಯಕ್ರಮಗಳು ಸಾಹಿತ್ಯದ ಒಲವಿನ ಜೊತೆಗೆ ನಾಡುನುಡಿಯ ಬಗ್ಗೆ ಅಭಿಮಾನ ಮೂಡಲು ಸಹಕಾರಿ ಎಂದರು.

ಸಂಸ್ಥೆಯ ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಆಡಳಿತ ಸಮಿತಿ ಸದಸ್ಯರಾದ ಸಿ. ಎಂ. ನಾಗರಾಜ, ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್. ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ನಂದಿತಾ ಉಭಾಳೆ, ಹರ್ಷಿತ ಉಭಾಳೆ, ಜೈನಬ್, ಮೊಹಮ್ಮದ್ ಸಾಹಿಲ್, ಸನ್ವಿತ್ ಸುವರ್ಣ, ಸುಮಂತ್ ಆಚಾರ್ಯ, ಶ್ರೇಯಾಶ್ರೀ, ಕಾರ್ತಿಕ್ ಆಚಾರ್ಯ, ಸೌರಭ್ ಕುರ್ಮೋಲಿ, ಕೀರ್ತನ್ ಪಿ., ಕಾವ್ಯಾಂಶ್ ಅವರು ಕುವೆಂಪು ಅವರ ಕವಿತೆ, ಭಾವಗೀತೆ, ನುಡಿಮುತ್ತು, ವಿಚಾರಧಾರೆಗಳನ್ನು ಪ್ರಸ್ತುತಪಡಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ್ ಕುಮಾರ್ ಸ್ವಾಗತಿಸಿದರು. ಕಲಾ ಶಿಕ್ಷಕಿ ಜ್ಯೋತಿ ಎಸ್. ಪೊದ್ದಾರ್ ವಂದಿಸಿದರು. ಸಹ ಶಿಕ್ಷಕಿ ರೇಖಾ ಐ. ಕಾರ್ಯಕ್ರಮ ನಿರೂಪಿಸಿದರು.□

***ಅರವಿಂದ ಬಿಜೈ***

## ಕನ್ನಡತನ ಸಂರಕ್ಷಣೆಗೆ ಬಾ. ಸಾಮಗ ಕರೆ



ವಿಶ್ವದ ಎಲ್ಲಾ ಕಡೆ ಇರುವ ಕನ್ನಡಿಗರಲ್ಲಿ ಕನ್ನಡತನ ಜೀವಂತವಾಗಿರುವುದರಿಂದ ಕರ್ನಾಟಕ ಸಂಸ್ಕೃತಿ ಅವನತಿಯ ಆತಂಕ ಬಿಟ್ಟು ಕನ್ನಡತನ ಉಳಿಸಿ ಬೆಳೆಸಲು ಸರಿಯಾದ ಕ್ರಮ ಕೈಗೊಳ್ಳಬೇಕೆಂದು ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ಕರೆ ನೀಡಿದರು. ಅವರು ಉಡುಪಿಯಲ್ಲಿ ರಥಬೀದಿ ಗೆಳೆಯರು, ಹಿರಿಯಡ್ಕ ಸಂಸ್ಕೃತಿ ಸಿರಿ ಟ್ರಸ್ಟ್ ನವೆಂಬರ್ 27ರಂದು ಏರ್ಪಡಿಸಿದ್ದ ಹೊರನಾಡಿನಲ್ಲಿ ಕನ್ನಡ ಕುರಿತ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಕರ್ನಾಟಕ ಸಂಸ್ಕೃತಿಗೆ ಅದ್ಭುತ ಶಕ್ತಿಯಿರುವುದರಿಂದ ತಾನು ದೆಹಲಿಯಲ್ಲಿ 31 ರಾಷ್ಟ್ರೀಯ ಕನ್ನಡ ಸಮ್ಮೇಳನಗಳನ್ನು ಕನ್ಯಾಕುಮಾರಿ, ಪಣಜಿ, ಕೊಲ್ಕತ್ತಾ, ಬರೋಡಾ, ಭೋಪಾಲ್, ಹೈದರಾಬಾದ್, ಚೆನ್ನೈ, ಕಾಠ್ಮಂಡು, ಪುದುಚೇರಿ, ಮುಂಬೈನಲ್ಲಿ ಒಟ್ಟು ಹತ್ತು ಅಖಿಲ ಭಾರತ ಕನ್ನಡ ಸಾಹಿತ್ಯ-ಸಂಸ್ಕೃತಿ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಯಿತೆಂದ ಸಾಮಗ ಅವರು ಜಾಗತೀಕರಣದ ಹೆಸರಿನಲ್ಲಿ ಕರ್ನಾಟಕ ಸಂಸ್ಕೃತಿ ಕುಲಗೆಡದಂತಾಗದಿರಲು ಕನ್ನಡಿಗರು ಸರಿಯಾಗಿ ಸಂಘಟಿತರಾಗಿ ಬದುಕಿನಲ್ಲಿ ತುಸು ಬದಲಾವಣೆ ಮಾಡಿಕೊಳ್ಳುವುದು ಅವಶ್ಯಕವೆಂದರು. ಹೊರನಾಡಿನ ಪ್ರಮುಖ ಕೇಂದ್ರಗಳಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ಸಂಸ್ಕೃತಿ ಸಂಗ್ರಹಾಲಯ ಸ್ಥಾಪಿಸಿ ಕನ್ನಡ ಪ್ರಚಾರಗೈದು ವಿಶ್ವಮಟ್ಟದಲ್ಲಿ ಕನ್ನಡಕ್ಕೆ ವಿಶೇಷ ಗೌರವ ದೊರಕಿಸಬೇಕೆಂದ ಸಾಮಗ ಅವರು ಜಾತಿ ಸಂಘಟನೆಗಳು ಸಮಾಜವನ್ನು ವಿಂಗಡಿಸದೆ ಕನ್ನಡತನವನ್ನು ವಿಜೃಂಭಿಸಬೇಕೆಂದರು.

ಸಾಹಿತಿ, ಸಂಸ್ಥೆಯ ಅಧ್ಯಕ್ಷ ಮುರಳೀಧರ ಉಪಾಧ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸುಬ್ರಹ್ಮಣ್ಯ ಜೋಶಿ ಸ್ವಾಗತಿಸಿದರು. ಸಮಾಜ ಸೇವಕ ಯು. ವಿಶ್ವನಾಥ ಶೆಣೈ ಅವರು ಸಾಮಗರನ್ನು ಗೌರವಿಸಿದರು. ಲಾಕ್ ಡೌನ್ ಅವಧಿಯ ಅನ್ನಪೂರ್ಣೆ ಶಾರದಕ್ಕ ಮಲ್ಪೆ ಅವರನ್ನು ಅಭಿನಂದಿಸಲಾಯಿತು. ಜೆ.ಪಿ. ಪ್ರಭಾಕರ್ ವಂದಿಸಿದರು.□

***ಬಾ. ಸಾಮಗ***

# ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದಿಂದ ಆಧುನಿಕ ಸಾಹಿತ್ಯ ಕುರಿತ ವಿಚಾರ ಗೋಷ್ಠಿ

ಆಧುನಿಕ ಸಾಹಿತ್ಯ ಕುರಿತು ನವದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠ ದಿನಾಂಕ 13 ಮತ್ತು 14 ಡಿಸೆಂಬರ್ 2021ರಂದು ಆನ್‌ಲೈನ್ ವಿಚಾರಗೋಷ್ಠಿಯನ್ನು ಏರ್ಪಡಿಸಿತ್ತು. ಸುಮಾರು 1900ನೇ ವರ್ಷದಿಂದ 2021ನೇ ವರ್ಷದವರೆಗೆ ಕನ್ನಡ ಸಾಹಿತ್ಯ ವಾಹಿನಿ ಸಣ್ಣಕತೆ, ಕಾದಂಬರಿ, ಅನುವಾದ, ಪ್ರವಾಸಕಥನ, ಆತ್ಮಚರಿತ್ರೆ, ಕಾವ್ಯ, ವ್ಯಕ್ತಿಚಿತ್ರಣ, ಚರಿತ್ರೆ, ಸ್ಥಳನಾಮಗಳ ಶೋಧ, ಶಾಸನಗಳ ಅಧ್ಯಯನ, ಕವಿಕಾವ್ಯ ಕೃತಿಗಳ ವಿಮರ್ಶೆ ಇನ್ನೂ ಹತ್ತು ಹಲವು ಮುಖಗಳಲ್ಲಿ ಪ್ರಚಲಿತವಾಗಿ, ಸಮುದ್ರದಂತೆ ಹರವನ್ನು ಹೊಂದಿದೆ. ಕನ್ನಡ ಸಾಹಿತ್ಯವು ಸೀಮಾ ಜಗತ್ತಿನವರೆಗೆ ಹಬ್ಬಿದೆ. ಇಂಥ ಸಾಹಿತ್ಯವನ್ನು ಮತ್ತೆ ಮತ್ತೆ ಓದುವುದು, ಬರೆಯುವುದು, ಶೋಧನೆಗೆ ಒಳಪಡಿಸದುವುದು ಕನ್ನಡ ಸಾಹಿತ್ಯಾಸಕ್ತರ ಕರ್ತವ್ಯ. ಇದೊಂದು ಅನುಸಂಧಾನವೆಂದು ಕನ್ನಡ ವಿಭಾಗದ, ಮುಖ್ಯಸ್ಥರು, ಪ್ರಾಧ್ಯಾಪಕರಾದ ಪ್ರೊ. ವಿಶ್ವನಾಥ ಅವರು ಪ್ರಾಸ್ತಾವಿಕ ನುಡಿಗಳಲ್ಲಿ ಹೇಳಿದರು. ಈ ಪ್ರಮುಖ ಗೋಷ್ಠಿಯನ್ನು ಉದ್ಘಾಟಿಸಿದ ಪ್ರೊ. ನಾಗಪ್ಪಗೌಡ, ಮಂಗಳೂರು ವಿಶ್ವವಿದ್ಯಾಲಯ ಅವರು, ಕನ್ನಡ ಕವನಗಳಿಂದ ಆಧುನಿಕ ಸಾಹಿತ್ಯದವರೆಗೆ ಕನ್ನಡ ಶ್ರೀಮಂತವಾದ ಉಜ್ವಲ ಪರಂಪರೆ ಹೊಂದಿದೆ. ಇಂಥ ಸಮ್ಮೇಳನ, ವಿಚಾರಗೋಷ್ಠಿ ಹೆಚ್ಚು ಹೆಚ್ಚು ನಡೆಯಬೇಕೆಂದು ಅಭಿಪ್ರಾಯಿಸಿದರು. ಪ್ರೊ. ಯತೀಶ್ವರರು ಮುಖ್ಯ ಅತಿಥಿಯಾಗಿದ್ದು ನವೋದಯ, ನವ್ಯ, ಪ್ರಗತಿಶೀಲ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು.

ಗೂಗಲ್ ಮೀಟ್ ಮಾಧ್ಯಮದ ಮೂಲಕ ಜಾಲತಾಣದಲ್ಲಿ ನಡೆದ ಎರಡು ದಿನಗಳ ಕಾರ್ಯಕ್ರಮದಲ್ಲಿ ಡಾ. ಬಿ.ಪಿ. ಆಶಾಕುಮಾರಿ, ಕು. ತೇಜಸ್ವಿನಿ, ಶ್ರೀಮತಿ ವಿದ್ಯಾ, ಡಾ. ರಾಘವೇಂದ್ರ, ಡಾ. ಪ್ರವೀಣ ಎಸ್. ಶ್ರೀ ಶಿವ್‌ರಾಜು, ಕೆ.ಎ.ಎಸ್. ಅಧಿಕಾರಿ, ಕರ್ನಾಟಕ ಸರ್ಕಾರ, ಡಾ. ಅನೀಲಕುಮಾರ, ಕು. ಪಲ್ಲವಿ, ಕು. ಪ್ರಮೋದ, ಶಂಕರರಾವ, ಪ್ರೊ. ಮಣಿ, ಪ್ರೊ. ರಂಗಸ್ವಾಮಿ, ಡಾ. ಶಿವಕುಮಾರ, ಶ್ರೀ ಅರವಿಂದ ಬಿಜೈ ಮತ್ತು ಡಾ. ದುರ್ಗಪ್ರವೀಣರವರು ತಮ್ಮ ತಮ್ಮ ಸಾಹಿತ್ಯಿಕ ಪ್ರಬಂಧ ಮಂಡಿಸಿದರು. ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಮಾನ್ಯ ಕೆ.ಎಸ್. ಮೂರ್ತಿಯವರ ಉಪಸ್ಥಿತಿಯಲ್ಲಿ ಪ್ರೊ. ಚಂದ್ರಕಿರಣ್, ಪ್ರೊ. ಬಿ.ಪಿ. ಕುಮಾರ ಅವರು ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಎರಡು ದಿವಸ ಕನ್ನಡದ ಕಂಪು ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮೂಲಕ ದೇಶಾದ್ಯಂತ ಘಮಘಮಿಸಿ ಪಸರಿಸಿತು. ಕೊನೆಯಲ್ಲಿ ವಿಷ್ಣು ಚವ್ಹಾಣ ಅವರು ಎಲ್ಲರಿಗೂ ವಂದಿಸಿದರು.

**ಪ್ರೊ. ವಿಶ್ವನಾಥ,**
ಕನ್ನಡ ಅಧ್ಯಯನ ಪೀಠ, ಭಾರತೀಯ ಭಾಷಾ ಕೇಂದ್ರ,
ಜೆ.ಎನ್.ಯು., ನವದೆಹಲಿ


## ದೊಂಬರಾಟ

ಬದುಕೊಂದು ನಯವಾದ ರೋಡು
ಜೆಲ್ಲಿಕಲ್ಲಿನ ಮೇಲೆ ತಾರು ನೋಡು
ಯೋಚಿಸಿ ನಿಧಾನವಾಗಿ ಚಲಿಸು
ಬಾಳೊಂದು ಸುಂದರ ಹಾಡು
ಮೇಲೆ ಕುಂತು ದೇವನಾಡಿಸುತಿರುವ ಆಟ
ಮೋಹ–ಭೋಗವೆಲ್ಲ ಮಾಯೆಯಾಟ
Name-Fame ende ಇಲ್ಲದ ಗೇಮು
ದೇವರಾಡ್ತೊ ದೊಂಬರಾಟದಲ್ಲಿ ದುಂಬಿಯಂತೆ
ಕೂಡಿ ಆಡಿದರೆ ಬದುಕು ಸವಿ ಜೇನು

*ಅಶ್ವಿನಿ ಬಿ.ಎಸ್.*



## ಶ್ರದ್ಧಾಂಜಲಿ



ಕನ್ನಡ ಚಲನ ಚಿತ್ರರಂಗದ ಹಿರಿಯ ನಟ ಶ್ರೀ ಶಿವರಾಂ ಅವರು ದಿನಾಂಕ 04.12.2021 ರಂದು ವಿಧಿವಶರಾಗಿರುವುದು ಕನ್ನಡ ಚಿತ್ರರಂಗಕ್ಕೆ ಹಾಗೂ ಸಾಂಸ್ಕೃತಿಕ ಲೋಕಕ್ಕೆ ತುಂಬಲಾರದ ನಷ್ಟ. ಕಿರುತೆರೆಯಲ್ಲಿಯೂ ಕೂಡ ಇವರು ನಟಿಸಿ ಕನ್ನಡಿಗರ ಮನವನ್ನು ಗೆದ್ದಿದ್ದಾರೆ.

ಶ್ರೀಯುತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ದೆಹಲಿ ಕರ್ನಾಟಕ ಸಂಘ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

## ನುಡಿನಮನ

# ಮೇರು ನಟರೊಂದಿಗೆ ನಂಟು ಇದ್ದರೂ ಸಹ ವಿನಯತೆಗೆ ಹೆಸರಾಗಿದ್ದರು-ನಟ ಶಿವರಾಂ

ಕನ್ನಡದ ಹಿರಿಯ ನಟ ನಿರ್ದೇಶಕ ನಿರ್ಮಾಪಕ ಶಿವರಾಂರವರ ಜೊತೆ ನನ್ನ ನಂಟು ಸುಮಾರು 20ವರ್ಷಗಳ ಇರಬಹುದು. ಅದು ನಾನು ಡೆಲ್ಲಿ ಸಿ.ಎಂ. ಶ್ರೀ ಸಾಹೇಬ್ ಸಿಂಗ್ ವರ್ಮಾ ಅವರ ಜೊತೆ ಪೈಲೆಟ್ ಡ್ಯೂಟಿಯಲ್ಲಿದ್ದೆ. 1998ರಲ್ಲಿ ಸಿರಿಫೋರ್ಟ್ ಆಡಿಟೋರಿಯಂನಲ್ಲಿ ಆಲ್ ಇಂಡಿಯಾ ಫಿಲಂ ಫೇರ್ ಅವಾರ್ಡ್ ಕಾರ್ಯಕ್ರಮ ನಡೆದಿತ್ತು. ಅದಕ್ಕೆ ಮುಖ್ಯ ಅತಿಥಿಗಳಾಗಿ ಅಂದಿನ ದೆಹಲಿ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿದ್ದರು. ಅಲ್ಲಿಗೆ ನಟ ಶ್ರೀಯುತ ಶಿವರಾಂ ಅವರು ಬಂದಿದ್ದರು. ಕಾರ್ಯಕ್ರಮ ಮುಗಿಸಿ ಮುಖ್ಯಮಂತ್ರಿ ಅವರು ಹೋದ ನಂತರ ನಾನು ಶಿವರಾಮಣ್ಣ ಅವರನ್ನು ಭೇಟಿ ಮಾಡಿ ಕನ್ನಡದಲ್ಲಿ ಮಾತಾಡ್ದೆ. ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅಂದಿನಿಂದ ಒಬ್ಬ ಸ್ನೇಹಿತನಾಗಿ, ಅಣ್ಣನಾಗಿ ನಮ್ಮ ನಂಟು ಅಂಟಿಕೊಂಡಿತ್ತು. ಅವರು ಒಮ್ಮೆ ಮುಖ್ಯಮಂತ್ರಿ ಅವರನ್ನು ಮಾತನಾಡಿಸಬೇಕು ಅಂತ ಅಪೇಕ್ಷೆಪಟ್ಟರು. ಅವರ ಸ್ನೇಹಿತರ ಮನೆಯಲ್ಲಿ ಸಫ್ದರ್‌ಜಂಗ್ ಎನ್‌ಕ್ಲೇವ್‌ನಲ್ಲಿ ಉಳಿದುಕೊಂಡಿದ್ದರು. ಮಾರನೆಯ ದಿನ ಅವರನ್ನು ಕರೆದುಕೊಂಡು ಹೋಗಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿಸಿದೆ. ತದನಂತರ ಬೆಂಗಳೂರಿಗೆ ಹೋದ ಮೇಲೆ ನಿರಂತರವಾಗಿ ನಮ್ಮ ನಡುವೆ ಮಾತುಕತೆ ನಡೆಯುತ್ತಲೇ ಇತ್ತು ಆದಾದಮೇಲೆ ಆರ್.ಕೆ. ಪುರಂನಲ್ಲಿ ವಿ.ಹೆಚ್.ಪಿ. ಸಮ್ಮೇಳನಕ್ಕೆ ಬಂದಿದ್ರು ಆಗಲೂ ಸಹ ಜೊತೆಯಲ್ಲಿ ಕೂತು ಊಟ ಮಾಡಿದ್ವಿ. ಮತ್ತೆ ಸಾಹಸಸಿಂಹ ದಿವಂಗತ ವಿಷ್ಣು ಸರ್ ನಮ್ಮನ್ನು ಅಗಲಿದ ಮೂರು ದಿನಗಳ ನಂತರ ಶಿವರಾಮಣ್ಣ ಅವರ ಜೊತೆ ಮಾತನಾಡಿದ್ದೆ ಮತ್ತೆ ದೆಹಲಿಗೆ ಬಂದಾಗಲೆಲ್ಲ ಅವರ ಜೊತೆ ಒಡನಾಟ ಇತ್ತು.

ವಿಷ್ಣುವರ್ಧನ್ ಅವರ ಕಾರ್ಯಕ್ರಮ ಡಿಕೆಎಸ್‌ನಲ್ಲಿ ಅತಿಥಿಗಳಾಗಿ ಶಿವರಾಂರವರು ಬಂದಿದ್ದರು. ಆಗ ಅವರನ್ನು ಜನಕಪುರಿ ಕನ್ನಡಕೂಟದ ಗಣೇಶನ ಪೂಜೆಗೆ ಆಹ್ವಾನಿಸಿ ಕರೆದುಕೊಂಡು ಬಂದಿದ್ದೆ. ಒಂದು ವರ್ಷದ ಹಿಂದೆಯೇ ಸಾಮಾಜಿಕ ತಾಣದಲ್ಲಿ ಶಿವರಾಂ ಅವರು ಇನ್ನಿಲ್ಲ ಅಂತ ಸುದ್ದಿ ಹರಡಿದ್ದನ್ನು ನೋಡಿ ಅವರಿಗೆ ದೂರವಾಣಿ ಕರೆ ಮಾಡಿದಾಗ ಫೋನ್‌ನಲ್ಲಿ ಇಲ್ಲ ನಾನು ಚೆನ್ನಾಗಿದ್ದೀನಿ ಅಂತಹದ್ದು ಏನು ಇಲ್ಲ, ಅಯ್ಯಪ್ಪನ ಆಶೀರ್ವಾದದಿಂದ ಚೆನ್ನಾಗಿದ್ದೀನಿ ಬೆಂಗಳೂರಿಗೆ ಬಂದಾಗ ಬನ್ನಿ ಅಂತ ಹೇಳಿ ನಾನು ಶೂಟಿಂಗ್‌ನಲ್ಲಿ ಇದ್ದೀನಿ ಮತ್ತೆ ಮಾಡ್ತೀನಿ ಅಂತ ಹೇಳಿ ಫೋನ್ ಕಟ್ ಮಾಡಿದರು ಅವರ ಜೊತೆ ಮಾತನಾಡಿದ ಕೊನೆಯ ಸಂದರ್ಭ.



ಅವರು ಧರ್ಮವನ್ನು ನಿಷ್ಠೆಯಿಂದ ಆಚರಿಸಿದರು. ಅಲ್ಲದೆ ಅಯ್ಯಪ್ಪ ಸ್ವಾಮಿಯ ಪೂಜೆಯ ಗುರುಗಳು ಸಹ ಆಗಿದ್ದರು. ಯಾವಾಗಲೂ ನಗುನಗುತ್ತಾ ಚಿತ್ರರಂಗದ ಒಳ್ಳೆಯ ಹಾಗೂ ಒಳಗಿನ ವಿಷಯಗಳನ್ನು ಸರಾಗವಾಗಿ ಹೇಳುತ್ತಿದ್ದರು. ವಿಷ್ಣುವರ್ಧನ ಬಗ್ಗೆ ಅವರಿಗೆ ತುಂಬಾನೇ ಪ್ರೀತಿ. ದೆಹಲಿಯಲ್ಲಿ ಆರ್.ಕೆ. ಪುರಂನಿಂದ ಜನಕಪುರಿಯವರೆಗೆ ಕಾರಿನಲ್ಲಿ ಮಾತನಾಡುತ್ತಾ ವಿಷ್ಣುವರ್ಧನ್ ಅವರ ಸ್ಮಾರಕ ಆಗದೇ ಇರುವ ಕೆಲವು ಕಾರಣಗಳನ್ನು ಹೇಳಿಕೊಂಡು ತುಂಬಾ ದುಃಖಪಟ್ಟಿದ್ದು ಗಮನಾರ್ಹವಾದ ವಿಷಯವಾಗಿತ್ತು. ಹಾಗೆಯೇ ಇನ್ನೂ ಅನೇಕ ರೀತಿಯ ಚಿತ್ರರಂಗದ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದರು. ಒಬ್ಬ ಹಿರಿಯ ನಟ ಹಾಗೂ ಕನ್ನಡ ತೆಲುಗು ತಮಿಳು ಮಲಯಾಳಂ ಸೇರಿದಂತೆ ವಿವಿಧ ಭಾಷೆಗಳ ಮೇರು ನಟರೊಂದಿಗೆ ನಂಟು ಇದ್ದರೂ ಸಹ ವಿನಯತೆಗೆ ಹೆಸರಾಗಿದ್ದರು. ಯಾವುದೇ ಅಹಂಕಾರವಾಗಲಿ ಅಥವಾ ಜಂಬವಾಗಲಿ ಅವರನ್ನು ಮುಟ್ಟಲೂ ಸಹ ಆಗಲಿಲ್ಲ. ಅಂತಹ ಹಿರಿಯಣ್ಣ ಹಿರಿಯ ಗೆಳೆಯ ಇನ್ನಿಲ್ಲ ಎಂಬುದು ದುಃಖದ ವಿಷಯ ದೇವರು ಅವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ.

*ಎನ್.ಆರ್. ಶ್ರೀನಾಥ್*

# ದಾಸ ಶ್ರೇಷ್ಠ ಕನಕದಾಸರ ತತ್ವಾದರ್ಶಗಳು ಹಾಗೂ ಸಂದೇಶಗಳು ಎಂದೆಂದಿಗೂ ಪ್ರಸ್ತುತ -ಡಾ. ವೆಂಕಟಾಚಲ ಹೆಗಡೆ




ಕವಿಯಾಗಿ, ದಾರ್ಶನಿಕರಾಗಿ, ಕೀರ್ತನೆಕಾರರಾಗಿ, ಹಲವಾರು ಕೀರ್ತನೆಗಳನ್ನು ರಚಿಸಿ, ಹಾಡುಗಳ ಮೂಲಕ ಸಮಾಜ ಸುಧಾರಣೆಗಾಗಿ ಶ್ರಮಿಸಿದವರು ದಾಸ ಶ್ರೇಷ್ಟ ಕನಕದಾಸರು ಎಂದು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು ಹಾಗೂ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಆದ ಡಾ. ವೆಂಕಟಾಚಲ ಹೆಗಡೆ ಅವರು ಹೇಳಿದರು. ಅವರು ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ಇವರು ದಿನಾಂಕ 05.12.2021 ರಂದು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ದಾಸ ಶ್ರೇಷ್ಟ ಕನಕದಾಸರ 534ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಕನಕದಾಸರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ದೀಪ ಬೆಳಗಿಸಿ, ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಕನಕದಾಸರು ತಾವು ಕಂಡದ್ದನ್ನು ಅಭಿವ್ಯಕ್ತಿಸಿದ್ದಾರೆ. ಕನಕದಾಸರು ಸಮಾಜಕ್ಕೆ ಬೆಳಕನ್ನು ತೋರಿದ ಮಹಾನ್ ದಾರ್ಶನಿಕ. ಲೋಕಾನುಭವವನ್ನು ಶ್ರೀಮಂತಗೊಳಿಸಿಕೊಂಡು ಕನ್ನಡ ಹರಿದಾಸ ಪರಂಪರೆಯಲ್ಲಿ ತಮ್ಮದೇ ಆದ ವಿಶಿಷ್ಟ ಸಾಹಿತ್ಯ ರಚನೆ ಮೂಲಕ ಕನ್ನಡ ನಾಡಿನಲ್ಲಿ ಮನೆಮಾತಾದಂತವರು. ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ, ಹರಿಭಕ್ತಿ ಸಾರ ಇನ್ನು ಹಲವಾರು ಅಪೂರ್ವ ಕೃತಿಗಳು ರಚನೆಯನ್ನು ಮಾಡಿದ್ದಾರೆ. ರಾಗಿ ಮತ್ತು ಭತ್ತ ಇವುಗಳನ್ನು ಸಾಂಕೇತಿಕವಾಗಿ ತೆಗೆದುಕೊಂಡಂತಹ 'ರಾಮಧಾನ್ಯ ಚರಿತ್ರೆ' ಮೂಲಕ ಒಂದು ವಿಶಿಷ್ಟವಾದಂತಹ ಸಂದೇಶವನ್ನ ಸಮಾಜಕ್ಕೆ ನೀಡಿದ್ದಾರೆ. ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಅವರು ರಚಿಸಿದ ನೂರಾರು ಕೀರ್ತನೆಗಳು ಇಂದಿಗೂ ಜನಮಾನಸದಲ್ಲಿ ನೆಲೆನಿಂತಿವೆ ಎಂದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಆಗಮಿಸಿದ ದೆಹಲಿ ವಲಯದ ಷಫರ್ಡ್ ಇಂಡಿಯಾ ಇಂಟರ್‌ನ್ಯಾಶನಲ್ ಕಾರ್ಯದರ್ಶಿ ಶ್ರೀ ಮನೋಜ್ ಪಾಲ್ ಅವರು ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಒಂದೆಡೆ ಹರಿಭಕ್ತಿ ಎಂದು ಪ್ರತಿಪಾದಿಸುತ್ತಾರೆ ಮತ್ತು ಇನ್ನೊಂದೆಡೆ ವಿಚಾರಪೂರ್ಣವಾದಂತಹ ಸಂದೇಶವನ್ನು ಜನಕ್ಕೆ ನೀಡುತ್ತಿದ್ದಾರೆ. ಸಮಾಜದಲ್ಲಿರುವ ಅಂಕುಡೊಂಕುಗಳನ್ನು ನೇರವಾಗಿ ಪ್ರಶ್ನಿಸುವ ಮೂಲಕ ಸಮಾಜದ ಸುಧಾರಣೆಗೆ ಬಹಳ ಮಹತ್ವದ ಕೆಲಸವನ್ನು ನಿರ್ವಹಿಸಿದ್ದಾರೆ. ಇಂತಹ ಶ್ರೇಷ್ಠ ಸಂತರ ಜ್ಞಾನವನ್ನು ನಾವು ಉತ್ತರಭಾರತೀಯರಿಗೂ ಪರಿಚಯ ಮಾಡಿಸುವ ಒಂದು ಕೆಲಸವನ್ನು ಮಾಡಬೇಕು. ಏಕೆಂದರೆ ಕನಕದಾಸರ ಬಗ್ಗೆ ಈಗ ಪ್ರಸ್ತುತ ದಕ್ಷಿಣ ಭಾರತದಲ್ಲಿ ಎಲ್ಲರಿಗೂ ತಿಳಿದಿದೆ ಆದರೆ ಉತ್ತರ ಭಾರತಿಯರಿಗೆ ಅವರ ಪರಿಚಯವಿಲ್ಲ. ಅವರು ನೀಡಿರುವ ಸಂದೇಶಗಳು ಇಲ್ಲಿನ ಜನರಿಗೆ ಸಿಗುವಂತಾಗಬೇಕಾದರೆ ಅವರ ಕೀರ್ತಿನೆ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಆಯೋಜಿಸುವ ಮೂಲಕ ಅವರು ನೀಡಿರುವ ಕೊಡುಗೆಯನ್ನು ನಾವು ಪರಿಚಯಿಸಬೇಕು ಎಂದು ಹೇಳಿದರು. ಸಂಘದ ಗೌರವಾಧ್ಯಕ್ಷರಾದ ಡಾ.ಮುನಿರಾಜು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಅಹಲ್ಯಾ ಚಿಂತಾಮಣಿ ಅವರು ಸೇರಿದಂತೆ ಹಲವಾರು ಹಿರಿಯ ಗಣ್ಯರು, ದೆಹಲಿ ಕನ್ನಡಿಗರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಶ್ರೀಮತಿ ಉಮಾಶ್ರೀ ಶ್ರೀನಿವಾಸ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನವದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಕಾರ್ಯದರ್ಶಿ ಎಸ್.ಡಿ. ಶ್ರೀನಿವಾಸ ಅವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಆಶಾಲತಾ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರ್ವಹಿಸಿದರು. ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಅಧ್ಯಕ್ಷ ಆರ್. ಮಹಾದೇವ ಅವರು ವಂದನಾರ್ಪಣೆ ಸಲ್ಲಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್, ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು. ಅವರುಗಳನ್ನು ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಗೌರವಿಸಿ ಅಭಿನಂದಿಸಲಾಯಿತು. ಇದೇ ಸಂದರ್ಭದಲ್ಲಿ ಸೇವೆಯಿಂದ ನಿವೃತ್ತಿ ಹೊಂದಿ ತಾಯ್ನಾಡಿಗೆ ಮರಳುತ್ತಿರುವ ಶ್ರೀ ತ್ಯಾಗೇಶ್ ಮೂರ್ತಿ ಮತ್ತು ಶ್ರೀ ಬಿ.ಎಸ್. ಸುರೇಶ್ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಖಜಾಂಚಿ ರಾಜಣ್ಣ ಡಿ ಬಿರಾದಾರ, ಪದಾಧಿಕಾರಿಗಳು, ಸದಸ್ಯರು ಹಾಗೂ ದೆಹಲಿ ಕನ್ನಡಿಗರು, ಮತ್ತಿತರರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ಶುಭಾ ದೇವಿಪ್ರಸಾದ, ಶ್ರೀಮತಿ ಮಮತಾ ಶಿವರಾಂ, ಪುಟಾಣಿ ಅವನಿ ನೆಲ್ಲಿ, ಶ್ರೀಮತಿ ಜಯಶ್ರೀ ಬಸವರಾಜ್, ಶ್ರೀಮತಿ ಉಮಾಶ್ರೀ, ಶ್ರೀ ಎ.ಟಿ. ಶ್ರೀನಿವಾಸ, ಶ್ರೀ ಎಸ್ ಕುಮಾರ ಹಾಗೂ ಶ್ರೀಮತಿ ನೇತ್ರಾ ಕುಮಾರ ಅವರು ಕನಕದಾಸರ ಕೀರ್ತನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಶ್ರೀ ಟಿ.ಎಂ. ಮೈಲಾರಪ್ಪ ಅವರ ರಾಗ ಸಂಯೋಜಿಸಿದ ಹಾಡನ್ನು ಶ್ರೀ ಹರಿಪ್ರಿಯ, ಶ್ರೀ ಅಮರೇಶ, ಕು. ಧನ್ವಿನ್ ಅವರು ಪ್ರಸ್ತುತ ಪಡಿಸಿದರು. □

***ಮಹಾದೇವ ಆರ್***

# ನವದೆಹಲಿಯ ಸ್ಫೂರ್ತಿ ಫೌಂಡೇಶನ್ ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನ ಆಚರಣೆ



ಸಂವಿಧಾನ ಶಿಲ್ಪಿ, ಭಾರತರತ್ನ ಡಾ. ಬಿ.ಆರ್ ಅಂಬೇಡ್ಕರ್ ಅವರ 65ನೇ ಮಹಾ ಪರಿನಿರ್ವಾಣ ದಿನದ ಪ್ರಯುಕ್ತ ಇಂದು ಸೋಮವಾರ ನವದೆಹಲಿಯ ಡಾ. ಬಿ.ಆರ್ ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಇವರ ಮೂಲಕ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಭಾರತ ರತ್ನ ಡಾ.ಬಿ.ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ದೀಪ ಬೆಳಗಿಸಿ ಪೂಜೆ ನೆರವೇರಿಸಿ, ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ, ಡಾ. ಬಿ.ಆರ್ ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಮೂಲಕ ಡಾ. ಬಿ.ಆರ್ ಅಂಬೇಡ್ಕರ್ ರವರಂತಹ ಮಹಾ ಪುರುಷರ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸುತ್ತಿರುವುದು ಸಂತಸ ತಂದಿದೆ. ಮುಂಬರುವ ದಿನಗಳಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಇವರೊಂದಿಗೆ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಉತ್ತಮ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದರು. ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರು ಈ ರಾಷ್ಟ್ರಕ್ಕೆ ನೀಡಿದ ಕೊಡುಗೆ ಅಪಾರ. ಅವರ ತತ್ವಾದರ್ಶಗಳನ್ನು ನಾವೆಲ್ಲರೂ ಪಾಲಿಸೋಣ, ಅವರು ಹಗಲಿರುಳು ಶ್ರಮವಹಿಸಿ ಬೃಹತ್ ಸಂವಿಧಾನದ ಕೊಡುಗೆ ಈ ದೇಶಕ್ಕೆ ನೀಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಅಧ್ಯಕ್ಷ ಬಿ.ಕೆ. ಬಸವರಾಜ್ ಅವರು ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯದರ್ಶಿ ಎಸ್. ಕುಮಾರ ಅವರು ವಂದಿಸಿದರು.

ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿಗಳಾದ ಬಿ.ನಾರಾಯಣ, ದೆಹಲಿ ಕರ್ನಾಟಕ ಸಂಘದ ಖಜಾಂಚಿಗಳು ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಗೌರವ ಸದಸ್ಯರಾದ ರಾಧಾಕೃಷ್ಣ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀಮತಿ ಆಶಾ ಶ್ಯಾಮಸುಂದರ್ ಹಾಗೂ ಕೆ.ಎಸ್. ಮೂರ್ತಿ, ಡಾ. ಬಿ.ಆರ್ ಅಂಬೇಡ್ಕರ್ ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ನ ಉಪಾಧ್ಯಾಕ್ಷರಾದ ತ್ಯಾಗೇಶ್ ಮೂರ್ತಿ, ಹರಿಪ್ರಿಯ, ಬಸವಣ್ಣೆ ಹುಂಡ್ರಿ, ಅಮರೇಶ, ವಿಜಯ ಕುಮಾರ ತೋರಗಲ್, ಶ್ರೀಮತಿ ಶೋಭಾ ನಾಗರಾಜ್, ಕೆ.ಪಿ. ಸತೀಶ ನಾಯಕ, ದೆಹಲಿ ಪೋಲೀಸ್ ಇನ್ಸ್ ಪೆಕ್ಟರ್ ಎ.ಎಸ್ ರಾಣಾ, ಶಶಿಕಾಂತ ಪಾಟೀಲ್, ಎನ್ ಆರ್ ರಂಗನಾಥ್ ಅವರುಗಳು ಉಪಸ್ಥಿತರಿದ್ದರು. □

***ಹರಿಪ್ರಿಯ***

# ದೆಹಲಿಯ ವೀರಶೈವ ಮಹಾ ಸಭಾ ಘಟಕದಿಂದ ಡಾ. ಕಂಟೀಕರ್ ಅವರಿಗೆ ಸನ್ಮಾನ



ಅಖಿಲ ಭಾರತ ವೀರಶೈವ ಮಹಾಸಭಾ, ದೆಹಲಿ ರಾಜ್ಯ ಘಟಕದ ವತಿಯಿಂದ ಇತ್ತೀಚೆಗೆ 2021ರ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಸಿದ್ಧರಾಮೇಶ್ವರ ಕಂಟೀಕರ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ತಮ್ಮ ವೃತ್ತಿ ಜೀವನದಿಂದ ನಿವೃತ್ತರಾಗಿ ತಾಯ್ನಾಡಿಗೆ ಮರಳುತ್ತಿರುವ ಶ್ರೀ ಶಿವಾನಂದ ಸಿರ್ಸೀಕರ್ ಅವರನ್ನೂ ಸಹ ಅಭಿನಂದಿಸಿ ಬೀಳ್ಕೊಡಲಾಯಿತು.

ಕಾರ್ಯಕ್ರಮವನ್ನು ದ್ವಾರಕ ಸೆಕ್ಟರ್ 22ರ UVNAC ಕಟ್ಟಡದಲ್ಲಿ ಅ.ಭಾ.ವೀ.ಮ. ದೆಹಲಿ ರಾಜ್ಯ ಘಟಕದ ಅಧ್ಯಕ್ಷರಾದ ಶ್ರೀ ಶ್ರೀಕಂಠ ಚೌಕೀಮಠರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ನಿವೃತ್ತ ಐ.ಪಿ.ಎಸ್. ಅಧಿಕಾರಿ ಶ್ರೀ ಯು.ಎನ್.ಬಿ. ರಾವ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅ.ಭಾ.ವೀ.ಮ. ದೆಹಲಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀ ಬಿ.ಆರ್. ಉಮೇಶ್ ಕಾರ್ಯಕ್ರಮಕ್ಕೆ ಸಂಚಾಲನೆ ನಿರ್ವಹಿಸಿದರು. ಕೋಶಾಧ್ಯಕ್ಷರಾದ ಡಾ. ಬಸವರಾಜ ಹಿರೇಮಠ್ ಅತಿಥಿಗಳಿಗೆ ಸ್ವಾಗತ ಕೋರಿದರು. ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್, ಹಿರಿಯ ಕನ್ನಡಿಗರಾದ ಬಿ.ಎಸ್. ಕಲ್ಲೂರು, ವಿ.ವಿ. ಬಿರಾದಾರ, ಸದಾನಂದ ಸ್ವಾಮಿ, ಬಸವರಾಜ ಬಂಗೇರ, ಶಶಿಕಾಂತ ಪಾಟೀಲ, ಪ್ರಫುಲ್ ಮಠ್ ಮತ್ತಿತರರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಶ್ರೀಕಂಠ ಚೌಕೀಮಠರವರು ತಮ್ಮ ಮುಂದಿನ ಚಟುವಟಿಕೆಗಳ ವಿವರಣೆಯನ್ನು ನೀಡಿದರು. ನಂತರ ಮಾತನಾಡಿದ ಡಾ. ಕಂಟೀಕರ್, ಯು.ಎನ್.ಬಿ. ರಾವ್ ಹಾಗೂ ರೇಣುಕುಮಾರ್ ಅವರು ಸಂಸ್ಥೆಯ ಮುಂದಿನ ಚಟುವಟಿಕೆಗಳಿಗೆ ತಮ್ಮ ಬೆಂಬಲ ಸೂಚಿಸಿದರು. ಡಾ. ಕಂಟೀಕರ್ ಅವರು ತಮ್ಮನ್ನು ಸನ್ಮಾನಿಸಿದ್ದಕ್ಕಾಗಿ ಅಖಿಲ ಭಾರತ ವೀರಶೈವ ಮಹಾಸಭಾ ದೆಹಲಿ ಘಟಕಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತಾ ತಮಗೆ ಸಂದ ಪ್ರಶಸ್ತಿಗೆ ಹರ್ಷ ವ್ಯಕ್ತಪಡಿಸಿದರು ಹಾಗೂ ಅವರು ತಂದೆ ತಾಯಿ, ಕುಟುಂಬ ವರ್ಗ ಹಾಗೂ ಗುರುಗಳನ್ನು ನೆನೆದರಲ್ಲದೆ ಇಡೀ ಕರ್ನಾಟಕದ ಜನತೆಗೆ ಧನ್ಯವಾದ ಅರ್ಪಿಸಿದರು. □

***ಬಿ.ಆರ್. ಉಮೇಶ್***

# ಆಯಿಯೇ ಮ್ಯಾಡಮ್ ಜಿ.. ಹ್ಯಾಂಡ್ಸಮ್ ಸಿಂಗಾಡಾ ಲೇಲೋ... ಹ್ಯಾಂಡ್ಸಮ್ ಸಿಂಗಾಡಾ.

ಎನ್ನುತ್ತಾ ಇಂದು ಬೆಳಿಗ್ಗೆ ಹಣ್ಣು– ಹೂವು ತೆಗೆದುಕೊಂಡು ಮನೆಯತ್ತ ಬರುತ್ತಿದ್ದ ಹಾಗೆ ಗಾಡಿ ತುಂಬಾ ಹಚ್ಚ ಹಸಿರು ಹಾಗೂ ಕಡುಗೆಂಪು ಮತ್ತು ತಿಳಿ ಗುಲಾಬಿ ಬಣ್ಣದ 'ಸಿಂಗಾಡಾ' ಅಂದರೆ ನೀರಿನಲ್ಲಿ ಬೆಳೆಯುವ ಕಾಯಿಯನ್ನು ಮಾರುವವ ನನ್ನ ಬಳಿಗೆ ಬಂದ.

ಎಲಾ ಇವನ.. ಈ ಸಿಂಗಾಡಾ ಅದ್ಯಾವಾಗ 'ಹ್ಯಾಂಡ್ಸಮ್' ಆಯ್ತೂಂತ ಯೋಚಿಸುತ್ತ ಅತ್ತ ತಿರುಗಿದಾಗ ಗಾಡಿಯ ಮೇಲೆ ಜಂಬ ಬಡಿಯುತ್ತಾ ಕುಳಿತ ಸಿಂಗಾಡಾಗಳು ನನ್ನ ನೋಡಿ ಕಿಸಕ್ಕನೆ ನಕ್ಕಾಗ ನಾನೂ ನಗುತ್ತ – ಅರೇ ವಾಹ್.. ಹೌದು ಭೈಯ್ಯಾ, ನವರಾತ್ರಿ ಹೊತ್ತಿಗೆ ಒಳ್ಳೇ ಕಾಯಿಗಳನ್ನ ತಂದಿದ್ದೀರಾ, ಇನ್ನೇನು ಅರ್ಧ ಗಂಟೆಯಲ್ಲೇ ಎಲ್ಲಾ ಗಾಯಬ್ ಆಗ್ತಾವೆ 'ಅಂದಾಗ ಆತ ಖುಶಿಯಿಂದ– ಜೀ ಜೀ ಭಾಭೀಜಿ, ಇವತ್ತು ಒಳ್ಳೇ ಮಾಲು ಸಿಕ್ಕಿದೆ. ಇವುಗಳನ್ನ ಹಾಗೇ ತಿನ್ನಿ ಭಾಭೀಜಿ ನಾಳೆ ತರೋದನ್ನ ಬೇಯಿಸಿ ತಿನ್ನಿ' ಎನ್ನುತ್ತಾ ನನಗೆ ಸಲಹೆ ನೀಡಿದ.

ಹ್ಯಾಗಪ್ಪಾ ಕೆಜಿ? ನವರಾತ್ರಿ ಅಂತ ಇವತ್ತಿನ ರೇಟ್ ಏರಿಸಿರಬಹುದಲ್ಲಾ? ಅಂದಾಗ– ಇಲ್ಲಾ ಭಾಭೀಜಿ... ಕೇವಲ 60 ರೂಪಾಯಿ ಕೆಜಿಗೆ. ಎಂದ. 'ಸರಿ 2 ಕೆಜಿ ಹಾಕಪ್ಪಾ' ಎಂದು ಆತ ತುಂಬಿ ಕೊಟ್ಟ ಚೀಲವನ್ನ ತೆಗೆದುಕೊಂಡು ಮನೆಯತ್ತ ಹೊರಟೆ. ನಮ್ಮ ಮನೆಯಲ್ಲಿ ಹೆಚ್ಚಾಗಿ ಹಸಿ ಕಾಯಿಯನ್ನೇ ಇಷ್ಟ ಪಡ್ತಾರೆ. ಈ ಹ್ಯಾಂಡ್ಸಮ್ ಕಾಯಿಗಳ ಹಿಂದೆ ಇವುಗಳನ್ನ ಬೆಳೆಯುವ ರೈತರು ನನ್ನ ಕಣ್ಣಮುಂದೆ ಹಾಯ್ದು ಹೋದರು.

**ಸಿಂಗಾಡಾ ಎಂದರೇನು ಅಂತ ನಿಮಗೆ ಗೊತ್ತ??**

'ಸಿಂಗಾಡಾ'– ವಾಟರ್ ಚೆಸ್ಟ್ನಟ್ (water chestnut) ಅಥವಾ ವಾಟರ್ ಕ್ಯಾಲ್ಟ್ರೊಪ್ ಇದು ನೀರಿನಲ್ಲಿ ಬೆಳೆಯುವ ಸಸ್ಯದ ತ್ರಿಕೋನಾಕಾರದ ಕಾಯಿ. ಇದರ ತಲೆಯ ಮೇಲೆ ಕೋಡಿನಾಕಾರದ 2 ಕೊಂಬು (ಸಿಂಗ) ಇರುತ್ತವೆ. ಹಾಗಾಗಿ ಇದನ್ನು ಸಿಂಗಾಡಾ ಎಂದು ಕರೆಯುತ್ತಾರೆ. ಇವು ದೇಹವನ್ನು ತಂಪಾಗಿಡುವ ಖಾದ್ಯ ಬೀಜಗಳು. ಇವುಗಳಿಗೆ ಯಾವುದೇ ರೀತಿಯ ರುಚಿ ಅಥವಾ ಪರಿಮಳ ಇರುವುದಿಲ್ಲ. ಇದರ ಪದಾರ್ಥ ತಯಾರಿಸಿದಾಗ ಮಾತ್ರ ತುಂಬಾ ರುಚಿಕರವಾಗಿರುತ್ತದೆ. ಕೇವಲ ಎಳೇ ಕಾಯಿಗಳು ಸ್ವಲ್ಪ ಸಿಹಿಯಾಗಿರುತ್ತವೆ. ನೀರಿನಲ್ಲಿ ಬೆಳೆದ ಕಾರಣ ಅಧಿಕ ಪ್ರಮಾಣದಲ್ಲಿ ಪೋಷಕಾಂಶಗಳನ್ನು ಹೊಂದಿರುತ್ತವೆ. ಇದರಲ್ಲಿ ಕೆಂಪು, ಗುಲಾಬಿ ಮೆಜಂಟಾ ಹಾಗೂ ಹಸಿರು ಬಣ್ಣದ ಕಾಯಿಗಳನ್ನು ನನ್ನ ಚಿತ್ರದಲ್ಲಿ ನೋಡಬಹುದು.

100 ಗ್ರಾಂ ಸಿಂಗಾಡಾ ಕೇವಲ 97 ಕ್ಯಾಲೊರಿಗಳನ್ನು ಮತ್ತು ತುಂಬಾಕಡಿಮೆ ಕೊಬ್ಬನ್ನು ಹೊಂದಿರುತ್ತದೆ. ಅಷ್ಟೇ ಅಲ್ಲ, ಇದರಲ್ಲಿ ಹೇರಳವಾಗಿ ನಾರಿನಾಂಶ ಅಂದರೆ ಫೈಬರ್, ಪೊಟ್ಯಾಶಿಯಂ, ಮ್ಯಾಂಗನೀಸ್ ಮತ್ತು ನಮ್ಮ ದೇಹಕ್ಕೆ ಪ್ರಯೋಜನಕಾರಕ ಇತರ ಅನೇಕ ಪೋಷಕಾಂಶಗಳೂ ಸಹ ಇವೆ.

ನವರಾತ್ರಿಗೆ ಉತ್ತರ ಭಾರತದಲ್ಲಿ ಎಲ್ಲರೂ ಉಪವಾಸ ಮಾಡ್ತಾರೆ. ಈ ಶಿಂಗಾಡಾ ಕಾಯಿಗಳನ್ನ ಹಸಿಯಾಗಿ ಅಥವಾ ಒಣಗಿಸಿ ಅದರ ಹಿಟ್ಟಿನ ವಿವಿಧ ವ್ಯಂಜನಗಳನ್ನು ಮಾಡಿ ಉಪವಾಸಕ್ಕೆ ಬಳಸುತ್ತಾರೆ. ಭಾರತದಲ್ಲಿ ಚೆಸ್ಟ್ನಟ್ ಅನ್ನು ಸಿಂಗಾಡಾ ಎಂದೂ ಬಾಂಗ್ಲಾದೇಶದಲ್ಲಿ ಪಾನಿಫಾ ಎಂದು ಕರೆಯಲಾಗುತ್ತದೆ. ಈ ಬೆಳೆಯನ್ನು ನಮ್ಮ ದೇಶದ "Tanks in Eastern India ಅಂದರೆ ಪೂರ್ವ ಭಾಗದಲ್ಲಿನ ಜಲಾವೃತ ಭಾಗಗಳ ಉತ್ತಮ ಮಣ್ಣಿನ ನೀರಿನಲ್ಲಿ ಬೆಳೆಯುತ್ತಾರೆ. ಅದರಲ್ಲೂ ವಿಶೇಶವಾಗಿ ಬಿಹಾರ್, ಪಶ್ಚಿಮ ಬಂಗಾಳ, ಜಾರ್ಖಂಡ್ ರಾಜ್ಯಗಳಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಎಳೆಯ ಕಾಯಿಯ ಸಿಪ್ಪೆಯನ್ನು ಸುಲಿದು ಒಳಗಿನ ಹೃದಯಾಕಾರದ ಬಿಳಿಯ ಬೀಜವನ್ನುಹಾಗೇ ತಿನ್ನಬಹುದು ಅಥವಾ ಬೇಯಿಸಿ, ಸಿಪ್ಪೆ ಸುಲಿದು ಉಪ್ಪು, ಚಾಟ್ ಮಸಾಲಾ ಹಾಕಿಯೂ ತಿನ್ನಬಹುದು. ಬಲಿತ ಕಾಯಿಗಳನ್ನು ಒಣಗಿಸಿ, ಸಿಪ್ಪೆ ತೆಗೆದು, ಬೀಸಿ ಹಿಟ್ಟು ಮಾಡಿಕೊಂಡು ಬಳಸಬಹುದು. ಇದರ ಹಲ್ವಾ ತುಂಬಾ ರುಚಿ. ಈ ಹಿಟ್ಟು ಈಗ ಎಲ್ಲಾ ಮಾಲ್‌ಗಳಲ್ಲೂ ದೊರೆಯುತ್ತದೆ.





ಸಿಂಗಾಡವನ್ನು ಉತ್ತಮ ಗೊಬ್ಬರ ಹಾಗೂ ಮಣ್ಣಿನಿಂದ ಹದಮಾಡಿದಂತಹ ನೀರಿನ ದೊಡ್ಡ–ದೊಡ್ಡ ಹೊಂಡಗಳಲ್ಲಿ ಬೆಳೆಯುತ್ತಾರೆ. ಇದರ ಗಿಡಗಳು ಕಮಲದ ಗಿಡಗಳಂತೆ ನೀರಿನ ಮೇಲೆ ತೇಲುತ್ತವೆ ಮತ್ತು ಬೇರುಗಳು ನೀರಿನಲ್ಲಿರುತ್ತವೆ. ಪ್ರವಾಹದ ನೀರು ನಿಲ್ಲುವ ಸ್ಥಳಗಳಲ್ಲಿ ನೀರು ಸ್ವಲ್ಪ ಆಳವಾಗಿದ್ದರೆ ಹಸಿ ಕಾಯಿಗಳನ್ನು ತೆಗೆಯಲು ಪುಟ್ಟ ಪುಟ್ಟ ತೆಪ್ಪಗಳ ಮೇಲೆ ಕುಳಿತು ಹರಿಯುತ್ತಾರೆ. ಬಲಿತ ಕಾಯಿಗಳು ನೀರಿನ ಮೇಲೆ ತೇಲುತ್ತವೆ. ಕಡಿಮೆ ಆಳದ ಹೊಂಡಗಳಲ್ಲಿ ನಿಧಾನವಾಗಿ ಇಳಿದು, ಗಿಡಗಳ ಬುಡದಲ್ಲಿರುವ ಕಾಯಿಗಳನ್ನು ಶೇಂಗಾ ಅಥವಾ ನೆಲಗಡಲೆಯನ್ನು ಹರಿಯುವ ಹಾಗೆ ಇದನ್ನೂ ಕೈಯಿಂದ ಹರಿಯುತ್ತಾರೆ. ಆದರೆ ಇಲ್ಲಿ ಆ ಗಿಡಗಳನ್ನು ಇನ್ನೊಂದು ಇಳುವರಿಗಾಗಿ ತೇಲಿ ಬಿಡುತ್ತಾರೆ. ಆಮೇಲೆ ಅದರಲ್ಲಿನ ನೀರನ್ನು ಖಾಲಿ ಮಾಡಿ ಬೆಳೆಯನ್ನು ತೆಗೆಯುತ್ತಾರೆ. ನೀರಿನಲ್ಲಿ ತೇಲುವ ಗಿಡದ ಕೆಳಭಾಗದಲ್ಲಿ ಅಡಗಿರುವ ಪೋಷಕಾಂಶಗಳಿಂದ ಕೂಡಿದ ಸಿಂಗಾಡಾ ಆರೋಗ್ಯಕ್ಕೆ ತುಂಬಾ ಒಳ್ಳೇದು.

**ರಕ್ತದೊತ್ತಡವನ್ನು ತಗ್ಗಿಸುತ್ತದೆ** :– ಅಧಿಕ ರಕ್ತದೊತ್ತಡವು ಹೃದಯ ರೋಗಗಳ ಅಪಾಯವನ್ನು ಹೆಚ್ಚಿಸುತ್ತದೆ ಎಂದು ನಮಗೆಲ್ಲ ತಿಳಿದಿದೆ. ಈ ಚಿಕ್ಕ ಕಾಯಿ ರಕ್ತದೊತ್ತಡವನ್ನು ಕಡಿಮೆ ಮಾಡುವಲ್ಲಿ ಸಹಾಯ ಮಾಡುತ್ತದೆ. ಸಿಂಗಾಡಾವು ಪೊಟ್ಯಾಸಿಯಮ್‌ನಲ್ಲಿ ಸಮೃದ್ಧವಾಗಿರುವುದರಿಂದ, ಇದು ಸೋಡಿಯಂ ಪರಿಣಾಮವನ್ನು ಕುಗ್ಗಿಸುತ್ತದೆ, ಹೀಗಾಗಿ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ. ಇದಲ್ಲದೆ ಸಿಂಗಾಡಾವು ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಇದು ಬೊಜ್ಜು ಕರಗಿಸಲು ನೆರವಾಗುತ್ತದೆ** :– ಇದರಲ್ಲಿ ಕಡಿಮೆ ಕ್ಯಾಲೋರಿ ಅಂಶ ಮತ್ತು ಹೆಚ್ಚಿನ ಫೈಬರ್ ಇದೆ. ಫೈಬರ್ ಜೀರ್ಣವಾಗಲು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ, ಅದು ನಿಮ್ಮನ್ನು ಹೆಚ್ಚು ಹೊತ್ತು ಹೊಟ್ಟೆ ತುಂಬಿದ ಹಾಗೆ ಅನಿಸಿ ಜಂಕ್ ಫುಡ್ ಅನ್ನು ತ್ಯಜಿಸಲು ಸಹಾಯ ಮಾಡುತ್ತದೆ.

**ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಬಹುದು** :– ಸಿಂಗಾಡಾದಲ್ಲಿ ಉತ್ಕರ್ಷಣ ನಿರೋಧಕ (ಆ್ಯಂಟಿಆಕ್ಸಿಡೆಂಟ್)ಗಳು ಅಧಿಕವಾಗಿದ್ದು, ದೇಹದಲ್ಲಿನ ಸ್ವತಂತ್ರ ರಾಡಿಕಲ್ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ ಮತ್ತು ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುತ್ತದೆ.

**ಒತ್ತಡ ನಿವಾರಿಸುತ್ತದೆ** :– ಸಿಂಗಾಡಾದಲ್ಲಿ ವಿಟಮಿನ್ ಬಿ 6 ಸಮೃದ್ಧವಾಗಿದೆ, ಇದು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ನಿಮ್ಮ ಮನಸ್ಥಿತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ, ನೀವು ಹೆಚ್ಚು ಆರಾಮವಾಗಿರುವಾಗ ನಿಮ್ಮ ನಿದ್ರೆಯ ಗುಣಮಟ್ಟವು ಸುಧಾರಿಸುತ್ತದೆ ಮತ್ತು ನಿಮ್ಮ ಆರೋಗ್ಯವೂ ಸಹ ಸುಧಾರಿಸುತ್ತದೆ.

ನೀವು ಈ ಕಾಯಿಗಳ ರುಚಿಯನ್ನು ಮೊದಲೆಂದೂ ನೋಡದಿದ್ದರೆ ಖಂಡಿತ ಒಮ್ಮೆ ತಿಂದು ನೋಡಿ. ◻

**ಸವಿತಾ ಇನಾಮದಾರ್**

ಆಹಾರಮೇಳ, 66ನೇಯ ಕನ್ನಡ ರಾಜ್ಯೋತ್ಸವ ಆಚರಣೆ... ಹೀಗೆ ಎಲ್ಲ ರೀತಿಯ ವಿಚಾರಗಳನ್ನು 'ಅಭಿಮತ'ದಲ್ಲಿ ಸಂಗ್ರಹಿಸಿರುವುದು ಅಭಿಮತ 'ಅಭಿಮುಖಿ'ಯಾಗಿಸಿದೆ. ಅಂತೂ ಡಿಸೆಂಬರ್ 21ರ ಸಂಚಿಕೆ ಸಂಗ್ರಹಯೋಗ್ಯ. ಸುಸಂಸ್ಕೃತ ಲೇಖನಗಳು ಸಮೃದ್ಧವಾಗಿವೆ. ಪತ್ರಿಕೆ ಸರ್ವಾಂಗ ಸುಂದರವಾಗಿದೆ. ಮುಂದಿನ ದಿನಗಳಲ್ಲಿ ತಮ್ಮ ಸಂಘದ ಆದೇಶಾನುಸಾರ ನಾನು ಸದಸ್ಯನಾಗುವೆನು. ದೂರದ, ದೇಶದ ರಾಜಧಾನಿಯಲ್ಲಿನ ಕನ್ನಡ ಚಟುವಟಿಕೆಗಳನ್ನು ಇಲ್ಲೇ ನಾನು ಓದಿ ಆಸ್ವಾದಿಸಲು ಅವಕಾಶವಾಗುವುದು.

ಸಹೃದಯರೇ, ತಮ್ಮ ಸಂಘದಿಂದ ಮುಂದಿನ 2022ರ ವರುಷ ಇನ್ನೂ ಇಂತಹ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚಲಿ ಎಂದು ಆಶಿಸುತ್ತಾ ಆ ಕನ್ನಡ ಭುವನೇಶ್ವರಿ ಸುಖ ಶಾಂತಿ, ಸಮೃದ್ಧಿ ತರಲೆಂದು ತಾಯಿಯಲ್ಲಿ ನನ್ನದೊಂದು ನಮ್ರ ವಿನಮ್ರ ಪ್ರಾರ್ಥನೆ.

**ಗಮಕಿ. ವಿದ್ವಾನ್. ಎಂ.ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು, ತುಮಕೂರು ಜಿಲ್ಲಾ ಶ.ಸಾ.ಪ

ಮಾನ್ಯ ಸಂಪಾದಕರೆ, ಡಿಸೆಂಬರ್ ತಿಂಗಳ ಅಭಿಮತದಲ್ಲಿ ತಮ್ಮ ಸಂಪಾದಕೀಯದಲ್ಲಿ ಸಂವಿಧಾನ ಸಮಿತಿಯ ಸದಸ್ಯರಾಗಿದ್ದ ಹಲವಾರು ಕನ್ನಡಿಗರ ಬಗ್ಗೆ ಇದುವರೆಗೆ ತಿಳಿದಿರದ ಮಾಹಿತಿಗಳನ್ನು ತಿಳಿಸಿದ್ದೀರಿ. ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಕನ್ನಡಿಗರು ಆಚರಿಸಿ ದಂತಹ ರಾಜ್ಯೋತ್ಸವ ಹಾಗೂ ಹಲವಾರು ಕಾರ್ಯಕ್ರಮಗಳ ಬಗ್ಗೆ ಉತ್ತಮವಾದ ಮಾಹಿತಿ ಸಿಕ್ಕಿದೆ. ತಮ್ಮ ಮಾರ್ಗದರ್ಶನದಲ್ಲಿ ಅಭಿಮತ ಮುಂದೆಯೂ ಹೀಗೆ ಉತ್ತಮವಾಗಿ ಮೂಡಿ ಬರಲಿ ಎಂದು ಹಾರೈಸುತ್ತೇನೆ.

**ಪ್ರೇಮಲತಾ ಬಿ**

ದೆಹಲಿ ಕರ್ನಾಟಕ ಸಂಘದ 'ಅಭಿಮತ'ಕ್ಕೆ ಅನಂತ ಅಭಿನಂದನೆಗಳು. ದೆಹಲಿ ಪಾರ್ಲಿಮೆಂಟ್‌ನಲ್ಲಿ 1982 ರಿಂದ 2011ರವರೆಗೆ ನಮ್ಮ ಯಜಮಾನರು ಆರ್. ಗೋಪಿನಾಥ್ ಕಾರ್ಯ ನಿರ್ವಹಿಸುತ್ತಿದ್ದರು. ನಿವೃತ್ತಿ ಹೊಂದಿದ ಬಳಿಕ ಮೈಸೂರಿಗೆ ಬಂದು ನೆಲೆಸಿದೆವು. ಹಿಂದಿನ ದಿನಗಳಲ್ಲಿ ಮಕ್ಕಳೊಂದಿಗೆ ಕರ್ನಾಟಕ ಸಂಘದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದೆವು. ಮೈಸೂರಿಗೆ ಬಂದು ಹತ್ತು ವರ್ಷಗಳಾದರೂ ಸಹ 'ನಿಮ್ಮ ಅಭಿಮತ' ನಮಗೆ ಪ್ರತೀ ತಿಂಗಳೂ ತಪ್ಪದೆ ತಲುಪುತ್ತಿದೆ. ಕರ್ನಾಟಕ ಸಂಘದ ಚಟುವಟಿಕೆಗಳನ್ನು ಓದುತ್ತಿದ್ದೇವೆ. ದೆಹಲಿಯ ಸವಿನೆನಪುಗಳೂ ನಮ್ಮ ಮನದಲ್ಲಿ ಇಂದಿಗೂ ಹಸಿರಾಗಿಯೇ ಉಳಿಯುವಂತೆ ಮಾಡಿದೆ 'ಅಭಿಮತ'. ಈ ಮಾಸ ಪತ್ರಿಕೆ ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಲೆಂದು ಶುಭಕೋರುತ್ತೇನೆ.

**ಸೂರ್ಯ ಪ್ರಭಾ ಎನ್**
ಮೈಸೂರು

ದೆಹಲಿ ಕರ್ನಾಟಕ ಸಂಘ ಹೊರತಂದಿರುವ ಡಿಸೆಂಬರ್ 'ಅಭಿಮತ' ಸಂಚಿಕೆ ಓದಿ ತುಂಬಾ ಸಂತೋಷವಾಯಿತು. ಎಷ್ಟೊಂದು ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿದ್ದೀರ. ಕನ್ನಡ ರಾಜ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ 'ನಾಡು ನುಡಿ' ಆನ್‌ಲೈನ್ ವಿಚಾರ ವಿನಿಮಯಕ್ಕೆ ನನ್ನನ್ನು ಆಹ್ವಾನಿಸಿ, ನನ್ನ ಅನಿಸಿಕೆಯನ್ನು ಮಂಡಿಸಲು ಅವಕಾಶ ನೀಡಿದ ನಿಮ್ಮೆಲ್ಲರಿಗೆ ಧನ್ಯವಾದಗಳು.


ದೆಹಲಿ ಕರ್ನಾಟಕ ಸಂಘ ಒಂದು ಅತ್ಯುತ್ತಮ ವೇದಿಕೆ ನೀಡಿ ಹೊರನಾಡ ಕನ್ನಡಿಗರು ನಾಡು-ನುಡಿ ಜೊತೆ ನಿರಂತರ ಸಂಪರ್ಕದಲ್ಲಿ ಇರಲು ಸಹಾಯ ಮಾಡುತ್ತಿದೆ. ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯ.

**ಡಾ. ದಮಯಂತಿ ಗೌಡ ರಾವ್**
ಬೆಂಗಳೂರು

ನಮಸ್ಕಾರ ಸರ್,
ನಿಮ್ಮ ನೇತೃತ್ವದಲ್ಲಿ ಮೂಡಿ ಬಂದ 'ಅಭಿಮತ' ಬಗ್ಗೆ ಎರಡು ಮಾತಿಲ್ಲ ಸರ್, ಇದರಲ್ಲಿ ಬಂದಿರುವ ಕಂಠೀಕರ್ ಸರ್ ಅಭಿಮತ ಸಂಭಾಷಣೆ ನನಗೆ ಇಷ್ಟವಾಯಿತು. ವಿಶೇಷ ವ್ಯಕ್ತಿಯ ವ್ಯಕ್ತಿತ್ವದ ಪರಿಚಯ ಓದಿ ತಿಳಿದುಕೊಳ್ಳದೆ, ನೇರವಾಗಿ ಕೇಳುತ್ತಿದ್ದೇವೆ ಎನಿಸುತ್ತಿತ್ತು.

**ಶ್ರೀಮತಿ ಸುಜಾತ ನಿಂಬಾಳ್**
ಗುರುಗ್ರಾಮ

# ನಟ ಡಾ. ಎನ್.ಬಿ. ಜಯಪ್ರಕಾಶ್ ಅವರೊಂದಿಗೆ ಸಂವಾದ



ಬಹುಮುಖ ಪ್ರತಿಭೆಯ ಹಾಸ್ಯನಟ ಡಾ. ಎನ್.ಬಿ. ಜಯಪ್ರಕಾಶ್ ಅವರೊಂದಿಗೆ ಇತ್ತೀಚೆಗೆ ಸಂವಾದ ಕಾರ್ಯಕ್ರಮ ಜರುಗಿತು. ದಿನಾಂಕ 12.12.2021ರಂದು ಆನ್‌ಲೈನ್ ಮೂಲಕ ನಡೆದ ಈ ಕಾರ್ಯಕ್ರಮವನ್ನು ದೆಹಲಿಯ ದಿನಕರ ಫೌಂಡೇಶನ್ ಆಯೋಜಿಸಿತ್ತು.

ರಂಗಭೂಮಿ, ಕಿರುತೆರೆ ಮತ್ತು ಸಿನಿಮಾಗಳಲ್ಲಿ ಹಾಸ್ಯನಟನಾಗಿ ಜನಪ್ರಿಯರಾಗಿರುವ ಡಾ. ಜಯಪ್ರಕಾಶ್ ಅವರು ಸಮಾಜಮುಖಿ ಕಾರ್ಯಗಳಲ್ಲೂ ತೊಡಗಿಸಿಕೊಂಡು ಮೆಚ್ಚುಗೆ ಗಳಿಸಿದ್ದಾರೆ. ಅವರಿಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ. ತಮ್ಮ ಕಲಾ ಪಯಣದ ಅನುಭವವನ್ನು ಹಂಚಿಕೊಂಡ ಜಯಪ್ರಕಾಶ್ ಅವರು ಬಾಲ್ಯದಲ್ಲಿ ಭಾವ ನಾಟಕ ರತ್ನ ಶ್ರೀಕಂಠಮೂರ್ತಿ ಮತ್ತು ಸುಬ್ಬಯ್ಯ ನಾಯ್ಡು ಅವರ ನಾಟಕಗಳಿಂದ ಪ್ರೇರಿತರಾಗಿ ನಾಟಕಗಳ ಕಡೆ ಆಸಕ್ತಿ ಬೆಳೆಸಿಕೊಂಡಿದ್ದಾಗಿ ತಿಳಿಸಿದರು. ಆಕಸ್ಮಿಕವಾಗಿ ಬಾಲಚಂದ್ರಹಾಸನಾಗಿ ನಟಿಸಿ ರಂಗಭೂಮಿಗೆ ಬಂದ ಅವರು ಸಾವಿರಾರು ಪ್ರದರ್ಶನ ಕಂಡ ಸರಿಗಮ ವಿಜಿಯವರ 'ಸಂಸಾರದಲ್ಲಿ ಸರಿಗಮ' ಮತ್ತು ಕಲಾಕೇಸರಿ ಉದಯಕುಮಾರ್ ಅವರ 'ಭಕ್ತ ಕನಕದಾಸ'ದ ಹಾಸ್ಯ ಪಾತ್ರಗಳ ಮೂಲಕ ಜನಪ್ರಿಯರಾದ ಬಗೆಯನ್ನು ವಿವರಿಸಿದರು. ಕಿರುತೆರೆ ಸಿನಿಮಾಗಿಂತಲೂ ಪ್ರಭಾವಶಾಲಿ ಮಾಧ್ಯಮ ಎಂದು ಅಭಿಪ್ರಾಯಪಟ್ಟ ಅವರು ತಮ್ಮ 'ಸಂಬಂಧ ಮಾಲೆ'ಯ ಗುಂಡಪ್ಪನ ಪಾತ್ರವನ್ನು ನಿದರ್ಶನವಾಗಿ ನೀಡಿದರು. ಮುಂದೆ ಅವರು 'ಎಲ್ಲರಂತಲ್ಲ ನನ್ನ ಹೆಂಡ್ತಿ', ಸರಸ ವಿರಸ, ಬದಲಾವಣೆ ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿದ್ದರು.

ಸಮೂಹ ನಿಧಿಯ ಮೂಲಕ ರಾಷ್ಟ್ರಪ್ರಶಸ್ತಿ ವಿಜೇತ 'ಹೂಮಳೆ' ಸಿನಿಮಾ ನಿರ್ಮಿಸಿದ ಜಯಪ್ರಕಾಶ್ ಅವರು ತಮ್ಮ ಹೊಸ ಚಿತ್ರ 'ಅಂತ್ಯವಲ್ಲ ಆರಂಭ'ದ ಕುರಿತು ಮಾತನಾಡಿದರು. ಅಕಾಲಿಕ ಸಾವಿಗೀಡಾದ ನಟ ಸಂಚಾರಿ ವಿಜಯ್ ಹೆಸರಿನಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡುವ ಇಂಗಿತವನ್ನು ವ್ಯಕ್ತಪಡಿಸಿದರು.

ತಮ್ಮ ಪರಿಹಾರ್ ಫೌಂಡೇಶನ್ ಮೂಲಕ ವಿಧವೆಯರಿಗೆ ಮತ್ತು ವಿಚ್ಛೇದಿತ ಮಹಿಳೆಯರಿಗೆ ನೆರವಾದ ಘಟನೆಗಳನ್ನು ಜಯಪ್ರಕಾಶ್ ಹಂಚಿಕೊಂಡರು. ಅಲ್ಲದೆ ನೆರೆಯ ಒರಿಸ್ಸಾ ರಾಜ್ಯದ ಬುಡಕಟ್ಟು ಮಹಿಳೆಯರಿಗೂ ಸಹಾಯ ಹಸ್ತ ನೀಡಿದ್ದು ಧನ್ಯತೆಯನ್ನು ನೀಡಿದೆ ಎಂದರು. ಈ ಕಾರ್ಯಕ್ಕೆ ಕೈ ಜೋಡಿಸಿದ ಒರಿಸ್ಸಾದ ಮಿತ್ರ ಗೋಕುಲ್ದಾಸ್ ಓಜ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ತಮ್ಮ ಕಲಾ ಜಗತ್ತಿನ ಅವಿಸ್ಮರಣೀಯ ಪ್ರಸಂಗಗಳನ್ನು ಮೆಲುಕು ಹಾಕಿದ ಜಯಪ್ರಕಾಶ್ ತಾವು ಅಭಿನಯಿಸಿದ 'ಭಕ್ತ ಕನಕದಾಸ' ನಾಟಕ ನೋಡಲು ಡಾ. ರಾಜ್‌ಮಾರ್ ಎರಡು ಬಾರಿ ಬಂದಿದ್ದಾಗಿ ತಿಳಿಸಿದರು. ಡಾ. ರಾಜ್ ತಮ್ಮ ಮನೆಗೂ ಕರೆಸಿಕೊಂಡು ಆತಿಥ್ಯ ನೀಡಿದ್ದನ್ನು ಸ್ಮರಿಸಿದರು. ಸಂವಾದದ ನಡುವೆ ರಂಗಗೀತೆಗಳನ್ನೂ ಹಾಡಿದ ಈ ಹಿರಿಯ ನಟ 'ಭಕ್ತ ಕನಕದಾಸ'ಮ ನಾಟಕದ 'ಬದುಕಿದೆನು ಬದುಕಿದೆನು' ಗೀತೆಯನ್ನು ಹೃದಯ ಸ್ಪರ್ಶಿಯಾಗಿ ಹಾಡಿದರು.

ದಿನಕರದ ಸಂಚಾಲಕ, ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಸೊಗಸಾಗಿ ಸಂವಾದವನ್ನು ನಡೆಸಿಕೊಟ್ಟರು. ಕಲಾವಿದ ಎಸ್. ಕುಮಾರ್ ಅವರು ಜಯಪ್ರಕಾಶ್ ಅವರನ್ನು ಪರಿಚಯಿಸಿದರು. ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಅಭಿನಂದಿಸಿ ವಂದಿಸಿದರು. ಟಿ.ಎಸ್. ರಮೇಶ್ ಮತ್ತು ಸಂತೋಷ್ ಉಪಾಧ್ಯಾಯ ಅವರು ತಾಂತ್ರಿಕ ಸಹಾಯ ನೀಡಿದರು.

**ಡಾ. ಅವನೀಂದ್ರನಾಥ್ ರಾವ್**

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING
Office :
B-303, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Jan-2022, Vol. No.32, Issue No. 4, Price Rs.1/-
RNI Regn. No. 53405/91, DL-SW-01/4016/22-24
Date of Publication : Jan 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P

